6. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ):– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ 2014–15ನೇ ಸಾಲಿನ ಆಯವ್ಯಯದ ಬಗ್ಗೆ ಈಗಾಗಲೇ ಈ ಸದನದಲ್ಲಿ ಬಹಳಷ್ಟು ಹಿರಿಯರು ಮತ್ತು ನಮ್ಮ ಸ್ನೇಹಿತರು ಮಾತನಾಡಿದ್ದಾರೆ. ಈ ಬಜೆಟ್ ಅನ್ನು ಮಾನ್ಯ ಸಿದ್ದರಾಮಯ್ಯನವರು 9ನೇ ಬಾರಿ ಮಂಡಿಸುತ್ತಿದ್ದಾರೆ ಮತ್ತು ಮುಖ್ಯಮಂತ್ರಿಯಾಗಿ 2ನೇ ಸಲ ಮಂಡಿಸಿದ್ದಾರೆ. 1,36,800 ಕೋಟಿ ರೂಪಾಯಿ ಬಜೆಟ್ ಅನ್ನು ಮಂಡಿಸಿದ್ದಾರೆ. ಈ ಬಜೆಟ್‌ನಲ್ಲಿ 'ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು' ಎನ್ನುವ ಪದವನ್ನು ಬಳಸಿದ್ದಾರೆ. ಇಲ್ಲಿ ನಾನು ಬಜೆಟ್ ಪುಸ್ತಕವನ್ನು ತಿರುವಿ ಹಾಕಿ ನೋಡಿದಾಗ ಶ್ರೀಮಾನ್ ಸಿದ್ದರಾಮಯ್ಯನವರು ಇಲಾಖೆಗಳಿಗೆ allocation ಮಾಡುವಾಗ ಶಿಕ್ಷಣಕ್ಕೆ ಈ ಬಾರಿ ಬಹಳ ದೊಡ್ಡ ಮೊತ್ತವನ್ನು ಕೊಟ್ಟಿದ್ದಾರೆ. ಸುಮಾರು 21,305 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಕಳೆದ ಬಾರಿ ಇದಕ್ಕೆ 18,923 ಕೋಟಿ ರೂ. ಇತ್ತು ಅಂದರೆ 2382 ಕೋಟಿ ರೂ.ಗಳನ್ನು ಜಾಸ್ತಿ ಕೊಟ್ಟಿದ್ದಾರೆ. ಹಾಗೆಯೇ ಇಂಧನ ಇಲಾಖೆಗೆ ಕೂಡ 11,693 ಕೋಟಿ ರೂ.ಗಳನ್ನು ಕೊಟ್ಟರೆ ಕಳೆದ ಬಾರಿ 10312 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಅಂದರೆ 1381 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿದ್ದಾರೆ. ಜಲಸಂಪನ್ಮೂಲಕ್ಕೆ ಈ ಬಾರಿ 11,349 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಕಳೆದ ಬಾರಿ 9,363 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು, ಅಂದರೆ, 1,086 ಕೋಟಿ ರೂಪಾಯಿ ಹೆಚ್ಚಿಗೆ ಕೊಟ್ಟಿದ್ದಾರೆ. ನಗರಾಭಿವೃದ್ಧಿಗೆ ಕಳೆದ ಬಾರಿ 9,286 ಕೋಟಿ ರೂ. ಕೊಟ್ಟಿದ್ದರು, ಈ ಬಾರಿ 9,995 ಕೋಟಿ ರೂಪಾಯಿ ಕೊಟ್ಟಿದ್ದಾರೆ ಅಂದರೆ 709 ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದ್ದಾರೆ. ಹಾಗೆಯೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಕಳೆದ ಬಾರಿ 8215 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು, ಈ ಬಾರಿ 9,261 ಕೋಟಿ ರೂಪಾಯಿಗಳನ್ನು

ಕೊಟ್ಟಿದ್ದಾರೆ. ಅಂದರೆ, 1143 ಕೋಟಿ ರೂಪಾಯಿಗಳನ್ನು ಜಾಸ್ತಿ ಕೊಟ್ಟಿದ್ದಾರೆ. ಇಷ್ಟಲ್ಲದೆ ಸಮಾಜ ಕಲ್ಯಾಣ ಇಲಾಖೆಗೆ ಕಳೆದ ಬಾರಿ 5,046 ಕೋಟಿ ರೂಪಾಯಿ ಕೊಟ್ಟಿದ್ದರು. ಈ ಬಾರಿ 6,475 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಅಂದರೆ, 1,429 ಕೋಟಿ ರೂಪಾಯಿಗಳನ್ನು ಜಾಸ್ತಿ ಕೊಟ್ಟಿದ್ದಾರೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಸರ್ಕಾರ ಕೃಷಿಗೆ ಕಳೆದ ಬಾರಿ ಸುಮಾರು 4,378 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಈ ಸಲ 5,397 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 1,019 ಕೋಟಿ ರೂಪಾಯಿ ಜಾಸ್ತಿಯಾದರೂ ಕೂಡ ಶೇಕಡಾವಾರು ಲೆಕ್ಕಕ್ಕೆ ತೆಗೆದುಕೊಂಡಾಗ, ಕಳೆದ ಬಾರಿ ಶೇಕಡ 13 ರಷ್ಟು ಹಣ ಕೊಟ್ಟಿದ್ದರೆ ಈ ಸಾರಿ ಬಜೆಟ್‌ನಲ್ಲಿ ಶೇಕಡ 10ಕ್ಕೆ ಇಳಿಸಿದ್ದಾರೆ ಅಂದರೆ ಶೇಕಡ 3 ರಷ್ಟು ಕೊರತೆ ಇದರಲ್ಲಿ ಎದ್ದುಕಾಣುತ್ತದೆ. ಹಾಗೆಯೇ ನೀರಾವರಿ ಯೋಜನೆಗಳಿಗೆ ಕಳೆದ ಬಾರಿ ಶೇಕಡ 18 ಕೊಟ್ಟಿದ್ದರೆ ಈ ಸಾರಿ ಶೇಕಡ 16ಕ್ಕೆ ಇಳಿಸಿದ್ದಾರೆ. ಇಂಧನಕ್ಕೆ ಕಳೆದ ಬಾರಿ ಶೇಕಡ 11ರಷ್ಟು ಕೊಟ್ಟಿದ್ದರೆ ಈ ಸಲ ಶೇಕಡ 8ಕ್ಕೆ ಇಳಿಸಿದ್ದಾರೆ. ಅಂದರೆ, ಕೃಷಿ, ನೀರಾವರಿ ಮತ್ತು ಇಂಧನ ಇವು ಒಂದಕ್ಕೊಂದು ಪೂರಕವಾಗಿವೆ ಇಲ್ಲಿ ಕೃಷಿಗೆ ಒತ್ತು ಕೊಟ್ಟು ರೈತರ ಪರವಾಗಿ ಹೆಚ್ಚು ಮಾಡುತ್ತೇವೆ, ಇದು ರೈತರ ಪರವಾದ ಸರ್ಕಾರ ಎಂದು ಶ್ರೀಮಾನ್ ಮುಖ್ಯಮಂತ್ರಿಯವರು ಹೇಳಿದ್ದರೆ, ಬಜೆಟ್ allocation ನಲ್ಲಿ ಮೂರು ಇಲಾಖೆಗಳಿಗೂ ಕೂಡ allocation ನಲ್ಲಿ ಕಡಿಮೆ ಮಾಡಿದ್ದಾರೆ. ಇದರಿಂದ ಕೃಷಿ, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣದ ಕೊರತೆಯಾಗಿ ಕೃಷಿ ಇಲಾಖೆ ಅಭಿವೃದ್ಧಿಗೆ ಬೇಕಾದಂಥ ಹಣ ಕೊಡದೇ ಕೊರತೆಯುಂಟಾಗಿ ಹಿನ್ನಡೆಯಾಗುತ್ತದೆ. ಇನ್ನು, ಗ್ರಾಮೀಣಾಭಿವೃದ್ಧಿಗೆ ಹಣ ಇಟ್ಟಿರುವುದು ನೋಡಿದರೆ ಅದು ಆಶಾದಾಯಕವಾಗಿದೆ. ಕಳೆದ ಬಾರಿ 8,218 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಈ ಸಾರಿ 9,361 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕಳೆದ ಬಾರಿ ಶೇಕಡ 4 ರಷ್ಟು ಕೊಟ್ಟಿದ್ದರೆ ಈ ಸಲ 7% ಗೆ ಏರಿಸಿದ್ದಾರೆ. ಗ್ರಾಮೀಣಾಭಿವೃದ್ಧಿಗೆ ಒತ್ತುಕೊಟ್ಟಿದ್ದಾರೆ ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಇವತ್ತು ನಮ್ಮ ಹಳ್ಳಿಗಳ ಅಭಿವೃದ್ಧಿಗೆ ಹಣ ಬೇಕಾಗುತ್ತದೆ. ನಾವು, ನೀವು ಮಲೆನಾಡಿನಿಂದ

ಬಂದಿದ್ದೇವೆ. ಇವತ್ತು ಇದನ್ನೆಲ್ಲ ನೋಡುತ್ತಾ, ನಾನು ಒಟ್ಟಾರೆ ನೋಡಿದಾಗ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂದು ಅವರ ಬಜೆಟ್ ಭಾಷಣದಲ್ಲಿ ಏನು ಹೇಳಿದ್ದಾರೆ, ಆ ರೀತಿ ಆಗಿಲ್ಲ. ಆದರೆ, ಇಡೀ ಮಲೆನಾಡಿನ ಭಾಗಕ್ಕೆ ಕಳೆದ ಬಾರಿ ಕೂಡ ಬಜೆಟ್‌ನಲ್ಲಿ ನಿರೀಕ್ಷಿಸಿದಂತೆ ನಮಗೆ ಯಾವುದೇ ಒತ್ತು ಕೊಟ್ಟಿಲ್ಲ. ಈ ಬಾರಿಯೂ ಕೂಡ ಹಾಗೆಯೇ ಆಗಿದೆ. ಪಕ್ಕದ ನಮ್ಮ ಕೊಡಗು ಜಿಲ್ಲೆಗೆ ಹಣ ಕೊಟ್ಟಿದ್ದಾರೆ, ಸಂತೋಷ. ಕಳೆದ ಬಾರಿ ಅವರಿಗೆ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು, ಈ ಬಾರಿಯೂ ರಸ್ತೆ ದುರಸ್ತಿಗೆಂದು 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ, ಚಿಕ್ಕಮಗಳೂರು ಜಿಲ್ಲೆಗಾಗಲಿ, ಶಿವಮೊಗ್ಗ ಜಿಲ್ಲೆಗಾಗಲಿ ಆ ರೀತಿ ಒತ್ತು ಕೊಟ್ಟ ಹಾಗೆ ಇಲ್ಲ. ಮಲೆನಾಡು ಅಭಿವೃದ್ಧಿ ಮಂಡಳಿ ಎಂದು ಒಂದು ಮಂಡಳಿಯನ್ನು ಮಾಡಿದ್ದಾರೆ. ಅದಕ್ಕೆ ಕಳೆದ ಬಾರಿ 34 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು, ಈ ಸಲ 35 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅದಕ್ಕೆ ಸುಮಾರು 60–70 ಕ್ಷೇತ್ರಗಳನ್ನು ಸೇರಿಸಿದ್ದಾರೆ. ಆ ಹಣವನ್ನು ಕ್ಷೇತ್ರವಾರು ಹಂಚಿದರೆ ಒಂದು ಕ್ಷೇತ್ರಕ್ಕೆ 30–40 ಲಕ್ಷ ರೂ. ಬರುತ್ತದೆ. ಹೀಗಾಗಿ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂದು ಅವರು ಬಜೆಟ್‌ನಲ್ಲಿ ಹೇಳಿರುವುದು ಇದು ಬರೀ ಸುಳ್ಳು ಎಂದು ಹೇಳಬೇಕಾಗುತ್ತದೆ. ಈ ಬಜೆಟ್‌ನಲ್ಲಿ ಎಲ್ಲೋ ಒಂದು ಕಡೆಗೆ ಸರ್ವಾಂಗೀಣ ಅಭಿವೃದ್ಧಿ ಎಲ್ಲಿ ಸಾಧ್ಯವಾಗುತ್ತದೆ? ಮಲೆನಾಡು ಪ್ರದೇಶದಲ್ಲಿ ನನ್ನ ಕ್ಷೇತ್ರವನ್ನು ತೆಗೆದುಕೊಂಡರೆ 1073 ಹಳ್ಳಿಗಳಿವೆ. ಮಾನ್ಯ ಜೀವರಾಜ್‌ರವರ ಕ್ಷೇತ್ರ ಸಹ ಬಹಳ ದೊಡ್ಡ ಕ್ಷೇತ್ರ. ನಮ್ಮದೂ ಕೂಡ ಬಹಳ ದೊಡ್ಡ ಮಲೆನಾಡು ಪ್ರದೇಶ. ಹಾಗಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು allocation ಮಾಡುವಾಗ ಈ ಪ್ರಾದೇಶಿಕ ಅಸಮಾನತೆ ಎದ್ದುಕಾಣುತ್ತಿದೆ. ಹೆಚ್ಚು ಜನಪ್ರಿಯ ಕಾರ್ಯಕ್ರಮಗಳಿಗೆ ಹಣ ಕೊಟ್ಟು ಅಭಿವೃದ್ಧಿ ಕೆಲಸಗಳಿಗೆ ಕಡಿಮೆ ಹಣ ಕೊಟ್ಟಿದ್ದಾರೆ, ಕಡೆಗಣಿಸಿದ್ದಾರೆ. ಆದ್ದರಿಂದ ಇದು ಅಭಿವೃದ್ಧಿಪರ ಅಲ್ಲ ಎನ್ನುವುದು ನಾನು ಹೇಳುತ್ತಿರುವುದಲ್ಲ. ಇಲ್ಲಿ ಬರೆದಿರತಕ್ಕಂಥ ಎಲ್ಲಾ ಪತ್ರಿಕೆಗಳು ಹೇಳುತ್ತಿವೆ.

ಶ್ರೀ ಡಿ.ಎನ್. ಜೀವರಾಜ್:– ಇದರಿಂದಾಗಿ ಪ್ರತ್ಯೇಕ ರಾಜ್ಯ ಮಾಡಿ ಎಂದು ಕೇಳಬಹುದೇನೋ?

ಶ್ರೀ ಬಿ.ಬಿ. ನಿಂಗಯ್ಯ:– ಕೇಳುವಂಥ ಸಂದರ್ಭ ಬರುತ್ತದೆಂದು ನಾನಾದರೂ ಅಂದುಕೊಂಡಿದ್ದೇನೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಕಡೆಗಣಿಸುತ್ತಿರುವುದು ನೋಡಿದರೆ ಮಲೆನಾಡಿನವರೆಲ್ಲ ಸೇರಿ ಪ್ರತ್ಯೇಕ ರಾಜ್ಯ ಕೇಳಲಿ ಎನ್ನುವ ಇಚ್ಛೆ ಅವರದ್ದು ಇರಬಹುದು. ಹಾಗೇನಾದರೂ ಆದರೆ ಪಕ್ಷಾತೀತವಾಗಿ ಒಪ್ಪಿಕೊಂಡುಬಿಡುತ್ತೇವೆ. ಅಂಥ ಸಂಧರ್ಭ ಏನಾದರೂ ಬಂದರೆ ನೀವೇ ಮುಖ್ಯಮಂತ್ರಿಯಾಗಬೇಕೆಂದು ಓಟು ಹಾಕುತ್ತೇವೆ. ಯಾವ ಕಾರಣಕ್ಕೂ ನೀವು ನಿರಾಕರಿಸಬಾರದು.

ಶ್ರೀ ಡಿ.ಎನ್. ಜೀವರಾಜ್:– ನಿಮ್ಮನ್ನೇ ಮುಖ್ಯಮಂತ್ರಿ ಮಾಡಬೇಕೆಂದು ನಾವಂತೂ ಓಟು ಕೊಡುತ್ತೇವೆ. ಇವತ್ತು ಯಾವುದಾದರೊಂದು ತೀರ್ಮಾನ ಆಗಿಯೇ ಹೋಗಲಿ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:– ಇವತ್ತು ಅಧ್ಯಕ್ಷರಿಗೆ ಹೀಗೆ ಹೇಳುತ್ತೀರಿ, ನಾಳೆ ಹೀಗೆ ಇರುವುದಿಲ್ಲ, ಬಿಜೆಪಿಯವರನ್ನು ಯಾರೂ ನಂಬುವುದಿಲ್ಲ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ನೀವು ಹೀಗೆ ಹೇಳಿ ಹೇಳಿ 20–20 ತಿಂಗಳು ಮಾಡಿಕೊಂಡಿರುವುದು. ಯಾರು ಯಾರನ್ನೂ ನಂಬುವುದಿಲ್ಲ ಎಂದು ಈ House ನಲ್ಲಿಯೇ ಆಗಿ ಹೋಗಿದೆ. ಅದು ಈಗ ಬೇಡ.

(ಗೊಂದಲ)

ಅಧ್ಯಕ್ಷರು:– ಸಾಕು. ನಿಂಗಯ್ಯನವರೆ, ಮುಂದುವರೆಸಿ.

ಶ್ರೀ ಬಿ.ಬಿ. ನಿಂಗಯ್ಯ:– ಪ್ರಜಾವಾಣಿ ಪತ್ರಿಕೆಯ ಸಂಪಾದಕೀಯದಲ್ಲಿ ಈ ರೀತಿ ಬರೆದಿದ್ದಾರೆ. "ಅಭಿವೃದ್ಧಿ ಕಡೆಗಣನೆ", ಇದು ನಮ್ಮ ರಾಜ್ಯದ ಹೆಚ್ಚು ಜನರು ಓದತಕ್ಕಂಥ ಪತ್ರಿಕೆ. "ರಾಜ್ಯ ಬಜೆಟ್, ಲೋಕಸಭೆ ಚುನಾವಣೆ ಮೇಲೆ ಕಣ್ಣಿಟ್ಟು ಮಾಡಿರತಕ್ಕಂಥದ್ದು", ಹಾಗೆಯೇ, ಕನ್ನಡಪ್ರಭ ದಿನಪತ್ರಿಕೆಯಲ್ಲಿ ಸಹ ಅದೇ ರೀತಿ ಹೇಳುತ್ತಾರೆ. "ಎಲ್ಲ ವರ್ಗದವರನ್ನು ಓಲೈಸಿರುವುದು ಬಜೆಟ್‌ನ ಮೂಲ ಧರ್ಮ" ಎನ್ನುವುದನ್ನು ಕನ್ನಡಪ್ರಭದಲ್ಲಿ ಹೇಳುತ್ತಾರೆ. ಹಾಗೆಯೇ Indian Express ನಲ್ಲಿ "C.M. smacks of more votes than resources" ಎನ್ನುವುದನ್ನು ಹೇಳುತ್ತಾರೆ. ಹಾಗಾಗಿ ಬಹಳಷ್ಟು ಕಾರ್ಯಕ್ರಮಗಳು ಎಲ್ಲರನ್ನೂ ಮೆಚ್ಚಿಸತಕ್ಕಂಥ ಹೂ ಕೊಡುವುದಕ್ಕಾಗುವುದಿಲ್ಲ, ಹೂ ಎಸಳು ಕೊಟ್ಟು ಎಲ್ಲರನ್ನೂ ಸಂತೃಪ್ತಿ ಪಡಿಸಿ, ಅದೂ ಕೂಡ ಯಾವ ದಿವಸ ಮಂಡಿಸಿದ್ದಾರೆ? ಪ್ರೇಮಗಳ ದಿನಾಚರಣೆ ದಿವಸ ಮಂಡಿಸಿದ್ದಾರೆ.

ಅಧ್ಯಕ್ಷರು:– 14ನೇ ತಾರೀಖು ಪ್ರೇಮಿಗಳ ದಿನಾಚರಣೆಯೇ?

ಶ್ರೀ ಬಿ.ಬಿ. ನಿಂಗಯ್ಯ:– ಫೆಬ್ರವರಿ 14ನೇ ತಾರೀಖು ಪ್ರೇಮಿಗಳ ದಿನಾಚರಣೆ, ಅಂದು ರೈತರು, ಮಹಿಳೆಯರು, ಅಂಗವಿಕಲರು, ಅಲ್ಪಸಂಖ್ಯಾತರು, ಅಹಿಂದ ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ವರ್ಗದವರನ್ನು ಮೆಚ್ಚಿಸುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು 2014–15ನೇ ಸಾಲಿನಲ್ಲಿ ಮಂಡಿಸಿದ್ದಾರೆ, ಲೋಕಸಭೆ ಚುನಾವಣೆ ಮೇಲೆ ಕಣ್ಣಿಟ್ಟು ಅವರು ಯಾತ್ರೆಗೆ ಹೋಗುವವರಿಂದ ಹಿಡಿದು ಶಾಲಾ ಮಕ್ಕಳವರೆಗೆ ಎಲ್ಲರಿಗೂ ಒಂದಲ್ಲೊಂದು ಕೊಡುಗೆ ನೀಡಿದ್ದಾರೆ' ಎನ್ನತಕ್ಕಂಥದ್ದು, ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ಇದು ಎಲ್ಲೋ ಒಂದು ಕಡೆ ಸಂಪೂರ್ಣ ಜನಪ್ರಿಯ ಬಜೆಟ್ ಆಗಿದೆಯೇ ಹೊರತು ಅಭಿವೃದ್ಧಿಗೆ ಪೂರಕವಾಗಿ ಮಾಡುವುದರಲ್ಲಿ ಮುನ್ನೋಟ ಅಥವಾ ದೂರದೃಷ್ಟಿ ಕೊರತೆ ಇದೆ. ಇದರ ನಡುವೆ ಕೂಡ ಸಮಾಜ ಕಲ್ಯಾಣ ಇಲಾಖೆಗೆ, ಕೃಷಿಗೆ ಮತ್ತು ಶಿಕ್ಷಣಕ್ಕೆ ಬಹಳ ಒತ್ತು ಕೊಟ್ಟಿದ್ದಾರೆ. ಅದನ್ನು ಸ್ವಾಗತ ಮಾಡುತ್ತಾ, ವಿಶೇಷವಾಗಿ ಮಲೆನಾಡು ಭಾಗಕ್ಕೆ ಬಹಳಷ್ಟು ಅನ್ಯಾಯವಾಗಿದೆ. ಹಿಂದಿನ ಸರ್ಕಾರದಲ್ಲಿ ಶ್ರೀಮಾನ್ ರವಿಯವರು, ಜೀವರಾಜ್‌ರವರು ನಮ್ಮ ಭಾಗದಲ್ಲಿ ಮಂತ್ರಿಗಳಾಗಿದ್ದಾಗ Medical college, Engineering college ಸರ್ಕಾರ

ಕೊಡತಕ್ಕಂಥದ್ದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದರು. ಕಳೆದ ಬಾರಿಯೂ ನಾವು ಒತ್ತಾಯ ಮಾಡಿ ಸದನದ ಬಾವಿಗೆ ಕೂಡ ಬಂದು ಮಾನ್ಯ ಮುಖ್ಯಮಂತ್ರಿಯವರಿಗೆ ಬೇಡಿಕೆ ಇಟ್ಟೆವು, ಒತ್ತಾಯ ಮಾಡಿದೆವು. ಈ ವರ್ಷ ಕೊಡುತ್ತೇವೆನ್ನುವ ಭರವಸೆಯನ್ನು ಕೊಟ್ಟು ನಮ್ಮನ್ನು ಬಾವಿಯಿಂದ ಹೊರಗಡೆ ಬರುವುದಕ್ಕೆ ಹೇಳಿದರು. ಆಯಿತು ಎಂದು ನಂಬಿ ಹೊರಗಡೆ ಬಂದೆವು. ಆದರೆ, ಈ ವರ್ಷ ಕೂಡ ಕೊಟ್ಟಿಲ್ಲ.

ಅಧ್ಯಕ್ಷರು:– ನನ್ನದೇನೆಂದರೆ, Engineering college ಜಾಸ್ತಿ ಆದವು, Medical college ಗಳು ಜಾಸ್ತಿ ಆದವು, ಆಸ್ಪತ್ರೆಗಳಿಗೆ ಡಾಕ್ಟರ್ಸ್ ಇಲ್ಲ, ಇಲಾಖೆಯಲ್ಲಿ ಇಂಜಿನಿಯರುಗಳು ಇಲ್ಲ.

ಶ್ರೀ ಬಿ.ಬಿ. ನಿಂಗಯ್ಯ:– ಹೌದು, ಒಪ್ಪುತ್ತೇನೆ. ಆದರೆ, ಅಭಿವೃದ್ಧಿ ದೃಷ್ಟಿಯಿಂದ ಒಂದು ಜಿಲ್ಲೆಗೆ ಮಂಜೂರು ಆದದ್ದನ್ನೂ ಕೂಡ ಮತ್ತೆ ಹಾಗೆಯೇ ಇಟ್ಟು ನಮಗೆ ಎಲ್ಲೋ ಒಂದು ಕಡೆ ಅನ್ಯಾಯ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಇದನ್ನು ಗಂಭೀರವಾಗಿ ತೆಗೆದುಕೊಂಡು ನಮಗೆ ಮತ್ತೆ Medical college ಅನ್ನು ಮಂಜೂರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:– ಮುಂದಿನ ವರ್ಷ ಕೊಟ್ಟೇ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ.ಬಿ. ನಿಂಗಯ್ಯ:– ಕೊಡಲೇಬೇಕು. ಆದರೆ, ನಮಗೆ ಮಂಜೂರು ಆಗಿರುವಂಥದ್ದು.

ಅಧ್ಯಕ್ಷರು:– ಪ್ರತಿ ಜಿಲ್ಲೆಗೆ ಕೊಡುತ್ತೇವೆಂದು ಹೇಳಿದ ಮೇಲೆ ಕೊಟ್ಟೇ ಕೊಡುತ್ತಾರಲ್ಲ? ಅದರಲ್ಲಿ ಬೇರೆ ಪ್ರಶ್ನೆ ಏನಿದೆ? ಪ್ರತಿಯೊಂದು ಜಿಲ್ಲೆಗೆ ಕೊಡುತ್ತೇವೆಂದು ಹೇಳಿಕೊಂಡಿದ್ದಾರೆ ಮತ್ತು ಮಂತ್ರಿಗಳು ಮಾತು ಕೊಟ್ಟಿದ್ದಾರೆ. ಕೊಟ್ಟೇ ಕೊಡುತ್ತಾರೆ.

ಶ್ರೀ ಡಿ.ಎನ್. ಜೀವರಾಜ್:– ಬಾಯಲ್ಲಿ ಹೇಳಿದ್ದಾರೆ, ಪುಸ್ತಕದಲ್ಲಿ ಇಲ್ಲ.

ಅಧ್ಯಕ್ಷರು:– No, no, he cannot escape.

ಶ್ರೀ ಬಿ.ಬಿ. ನಿಂಗಯ್ಯ:– ಬಾಯಲ್ಲಿ ಹೇಳಿದ್ದಾರೆ, ಬಜೆಟ್‌ನಲ್ಲೂ ಹೇಳಿದ್ದಾರೆ ಆದರೆ ನಮ್ಮ ಜಿಲ್ಲೆಯನ್ನು ಸೇರಿಸಿಲ್ಲ ಎನ್ನುವುದನ್ನು ಹೇಳುತ್ತಿದ್ದೇನೆ. ಏನು ಮಾಡುತ್ತೀರಿ? ಮಂಜೂರಾಗಿತ್ತು, ನೀವೆಲ್ಲ ಸದಸ್ಯರಾಗಿದ್ದೀರಿ ಎಂದು ನಮ್ಮ ಜನರು ಕೇಳುತ್ತಿದ್ದಾರೆ, ಅದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತಂದು, ಮಲೆನಾಡಿನಲ್ಲಿ ವಿಶೇಷವಾಗಿ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ನಾವೆಲ್ಲ ಮಲೆನಾಡಿನಲ್ಲಿದ್ದೇವೆ, ನೆಮ್ಮದಿಯಾಗಿ ಜನರು ಜೀವನ ಮಾಡತಕ್ಕಂಥ ಸ್ಥಿತಿ ಇಲ್ಲ. ಇವತ್ತು ನ್ಯಾಯಲಯದ ಆದೇಶದ ನೆಪ ಇಟ್ಟುಕೊಂಡು ಇಡೀ ಮಲೆನಾಡಿನಲ್ಲಿ ರೈತರು ಸುಮಾರು 3–4 ಪೀಳಿಗೆಗಳಿಂದ ಕೃಷಿ ಮಾಡಿಕೊಂಡು ಬಂದ ಜಮೀನಿನಿಂದ ಒಕ್ಕಲೆಬ್ಬಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಇದೇ ಮನೆಯಲ್ಲಿ 3–4 ಬಾರಿ ಇಲ್ಲೂ 2–3 ಬಾರಿ ಮತ್ತು ಬೆಳಗಾಂನಲ್ಲೂ 1 ಬಾರಿ, ಕಳಸದ ಇನಾಂ ಜಮೀನಿನಲ್ಲಿ ಕೃಷಿ ಮಾಡಿಕೊಂಡು ವಾಸ ಮಾಡುತ್ತಿರುವ ಸುಮಾರು 100 ವರ್ಷಗಳ ಇತಿಹಾಸ ಇರತಕ್ಕಂಥ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಮಾನ್ಯ ಕಂದಾಯ ಸಚಿವರು ಸದನದಲ್ಲಿದ್ದಾರೆ. ಇಲ್ಲಿ ತಮ್ಮ ಮೂಲಕ ಅವರ ಗಮನವನ್ನು 2–3 ಸಲ ಸೆಳೆದಿದ್ದೆ. ತಾವೂ ಕೂಡ direction ಕೊಟ್ಟಿರಿ.

ಅಧ್ಯಕ್ಷರು:– ಸ್ವಲ್ಪ ಫರ್ಜಿಸಿರಿ.

ಶ್ರೀ ಬಿ.ಬಿ. ನಿಂಗಯ್ಯ:– ಸರ್ಕಾರ ಅದಕ್ಕೆ ಒಂದು affidavit ಕೊಟ್ಟು ದಯಮಾಡಿ ರೈತರನ್ನು ಉಳಿಸಿಕೊಳ್ಳಬೇಕು, ಸರ್ಕಾರ ಕೋರ್ಟಿಗೆ ಆ ನಿಲುವನ್ನು ಪುನರ್‌ಪರಿಶೀಲನೆ ಮಾಡಬೇಕೆನ್ನುವ ಒತ್ತಾಯ ಮಾಡಿದ್ದರೂ ಅದನ್ನು ಸರ್ಕಾರ ಮಾಡುತ್ತಿಲ್ಲ.

ಅಧ್ಯಕ್ಷರು:- ನಿಂಗಯ್ಯನವರೆ, ಅವತ್ತು ಆ ಕಾನೂನಿನ Preamble ನಲ್ಲಿ ಬರೆದಂಥ ಪದಗಳನ್ನು ಓದಿಕೊಂಡರೆ ಯಾರಿಗಾದರೂ ಪ್ರಜ್ಞೆ ಇರತಕ್ಕಂಥ ಮನುಷ್ಯನಿಗೆ ಅರ್ಥವಾಗುತ್ತದೆ. ವಂಚನೆಗೆ ಒಳಗಾಗಿರತಕ್ಕಂಥ ಜನರಿಗೆ ನ್ಯಾಯ ಕೊಡಬೇಕೆಂದು. ಅದು ಎಲ್ಲಿದೆಯೋ ಎಂದು ಬ್ಯಾಟರಿ ಹಾಕಿ ಹುಡುಕುತ್ತಿದ್ದೇನೆ.

ಶ್ರೀ ಬಿ.ಬಿ. ನಿಂಗಯ್ಯ:- ನಾನು ಮತ್ತೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಸರ್ಕಾರ ಗಂಭೀರವಾಗಿ ಚಿಂತನೆ ಮಾಡುತ್ತೇವೆಂದು ಹೇಳಿದಿರಿ. ಸನ್ಮಾನ್ಯ ಕಾನೂನು ಸಚಿವರು A.G. ಯವರ ಜೊತೆಗೆ ಮಾತನಾಡಿ Affidavit ಕೊಡುತ್ತೇವೆ ಎಂದು ಕಳೆದ Assemblyಯಲ್ಲಿ ಮಾತನಾಡುತ್ತಾ ಹೇಳಿದಿರಿ. ಆದರೆ, ಇವತ್ತಿನವರೆಗೆ ಆ ತೂಗುಕತ್ತಿ ರೈತರ ಮೇಲೆ ತೂಗುತ್ತಿದೆ. ರಾಜ್ಯದ ಮುಖ್ಯಮಂತ್ರಿಯಾಗಿದ್ದಂಥ ನಮ್ಮ ನಾಯಕರಾದ ಸನ್ಮಾನ್ಯ ಕುಮಾರಸ್ವಾಮಿಯವರನ್ನು ಒಂದಲ್ಲ ಎರಡು ಬಾರಿ ಕರೆದುಕೊಂಡು ಹೋಗಿ ರೈತರಿಗೆ ಧೈರ್ಯ ತುಂಬತಕ್ಕಂಥ ಕೆಲಸ ಮಾಡಿದೆವು. ಮೊನ್ನೆ ಇನ್ನೇನು ಒಕ್ಕಲೆಬ್ಬಿಸುತ್ತಾರೆ ಎಂದಾಗ ಮತ್ತೆ ಕರೆಸಿ ಮಾತನಾಡಿಸಿದೆ. ಆ ದಿನ ರವಿಯವರೂ ಕೂಡ ಬಂದಿದ್ದರು. ಸುಮಾರು ಮೂರು ಸಾವಿರ ರೈತರುಗಳನ್ನು ಸೇರಿಸಿ ಕೆಡವಲಿಕ್ಕೆ ಬಿಡುವುದಿಲ್ಲವೆಂದು ಒತ್ತಾಯ ಮಾಡಿದೆವು. ಆ ದಿನ ಕಂದಾಯ ಮತ್ತು ಅರಣ್ಯ ಸಚಿವರಿಗೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳಿಗೆ ಒತ್ತಾಯ ಮಾಡಿ, ಅಲ್ಲಿ ಒಕ್ಕಲೆಬ್ಬಿಸಲಿಕ್ಕೆ ಬಂದಿರತಕ್ಕಂಥ ಸುಮಾರು ನಾನೂರು ಜನ ಪೊಲೀಸ್‌ನವರು ಇದ್ದರು. ನೂರಾರು ಜನ ಅರಣ್ಯ ಇಲಾಖೆಯ ಅಧಿಕಾರಿಗಳು ಬಂದಿದ್ದರು. ಅವರಿಗೆಲ್ಲಾ ಒತ್ತಾಯ ಮಾಡಿ ವಾಪಸ್ ಕಳುಹಿಸಿ ಕೊಟ್ಟೆವು. ಕೋರ್ಟಿನಲ್ಲಿ ಇನ್ನೂ ತೀರ್ಮಾನವಾಗಬೇಕಾಗಿದೆ, review petition ಚರ್ಚೆಯಲ್ಲಿದೆ. ಮೊನ್ನೆ 24 ಕ್ಕೆ hearing ಆಗಿದೆ, ಪುನಃ ಮುಂದಿನ ತಿಂಗಳು 7ನೇ ತಾರೀಖಿಗೆ ಅದನ್ನು ಇಟ್ಟಿದ್ದಾರೆ. ಸರ್ಕಾರ ನಮ್ಮ ನೆರವಿಗೆ ಬಂದು ಅವರನ್ನು ಉಳಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:– ಇದು ಕೋರ್ಟಿನಲ್ಲಿ ಬಗೆಹರಿಯುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳನ್ನು ಕಂಡು ಮಾನ್ಯ ಅರಣ್ಯ ಸಚಿವರು ಮತ್ತು ಮಾನ್ಯ ಕಂದಾಯ ಸಚಿವರು ಎಲ್ಲಾ ಒಟ್ಟಿಗೆ ಕುಳಿತು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ಪ್ರಯತ್ನಿಸಿ.

ಶ್ರೀ ಬಿ.ಬಿ. ನಿಂಗಯ್ಯ:– ದಯಮಾಡಿ ತಾವು ಅದಕ್ಕೆ ಆದೇಶ ಮಾಡಬೇಕು.

ಶ್ರೀ ಎಸ್. ಚಿಕ್ಕಮಾದು:– ಮಾನ್ಯ ಅಧ್ಯಕ್ಷರೆ, ತಾವು ಅವರ ಬಗ್ಗೆ ಕಳಕಳಿ ಮತ್ತು ಹೆಚ್ಚಿನ ಕಾಳಜಿ ಇರತಕ್ಕಂಥವರು, ದಯಮಾಡಿ ಆ ಮೂರು ಜನ ಸಚಿವರುಗಳನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಒಂದು ಕಡೆಗೆ ಸೇರಿಸಿ ಸಭೆ ಮಾಡಿ. ಏಕೆಂದರೆ, ಈ ದಿನವೂ ಕೂಡ ನಮ್ಮ ಕೋಟೆ ತಾಲ್ಲೂಕಿನಲ್ಲಿ ಧರಣಿ ಕುಳಿತ್ತಿದ್ದಾರೆ. ನಿರಾಶ್ರಿತರಿಗೆ ಜಮೀನು ಕೊಟ್ಟಿಲ್ಲ. ಅದರ ಬಗ್ಗೆ ಸರ್ಕಾರ ಭರವಸೆ ಕೊಟ್ಟಿತ್ತು. ದಯಮಾಡಿ ತಾವೇ ನೇತೃತ್ವಹಿಸಿ, ಅವರನ್ನು ಒಕ್ಕಲೆಬ್ಬಿಸದ ರೀತಿಯಲ್ಲಿ ರೈತರಿಗೆ ಸಹಾಯ ಮಾಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ತಾವೇ ಸಲಹೆ ಮಾಡಿದ ಹಾಗೆ, ನಮ್ಮ ಈ ಭಾಗದ ಶಾಸಕರ ಒಂದು ಸಭೆ ಕರೆದು, ಮಾನ್ಯ ಮುಖ್ಯಮಂತ್ರಿಗಳು, ಕಾನೂನು ಸಚಿವರು, ಅರಣ್ಯ ಸಚಿವರು ಮತ್ತು ಕಂದಾಯ ಸಚಿವರ ಜೊತೆಗೆ ಚರ್ಚೆ ಮಾಡಿ ಈ ಸಮಸ್ಯೆ ಬೇಗ ಪರಿಹರಿಸಿ. ನಮ್ಮ ಭಾಗದಲ್ಲಿ ನಮಗೆ ಬಹಳ ಕಷ್ಟವಾಗಿದೆ.

ಅಧ್ಯಕ್ಷರು:– ಮಾಡೋಣ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ, ನಮ್ಮ ಕಾನೂನು ಸಚಿವರು ಇಲ್ಲಿಯೇ ಇದ್ದಾರೆ, ಎಲ್ಲರೂ ಸೇರಿ ಒಂದು ಸಭೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಮಲೆನಾಡು ಪ್ರದೇಶದಿಂದ ಬಂದಂಥ ಶಾಸಕರೆಲ್ಲರನ್ನೂ ಒಂದು ಕಡೆಗೆ ಕರೆಸಿ, ನೀವು ಹಾಗೂ ಮುಖ್ಯಮಂತ್ರಿಗಳು ಒಂದು ಕಡೆ ಕುಳಿತು ವಸ್ತುಸ್ಥಿತಿಯನ್ನು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬನ್ನಿ. ನಿಮಗೆ ಇನ್ನೊಂದು ವಿಷಯ ಹೇಳುತ್ತೇನೆ, ಕೇಳಿ. ಮೊನ್ನೆ ನಮ್ಮಲ್ಲಿಯೇ ಇಂಡೀಕರಣ ಎಂದು ಮಾಡಿದ್ದಾರೆ.

ನಾವು ಭೂಮಿ ಮಂಜೂರು ಮಾಡಿದ್ದೇವೆ, ಸಾಗುವಳಿ ಚೀಟಿ ಕೊಟ್ಟಿದ್ದೇವೆ, ಊರು ಬಂದಿದೆ, ಎಲ್ಲಾ ಬಂದಿದೆ, ಇಂಡೀಕರಣ ಎಂದು ಮಾಡಿ forest ಎಂದು RTC ಯಲ್ಲಿ entry ಮಾಡಿದ್ದಾರೆ. ಈಗ ಏನು ಮಾಡಬೇಕು ಹೇಳಿ. ಅದಕ್ಕೆ ನಾನು ಅವರಿಗೂ ಮತ್ತು ಇವರಿಗೂ ಪತ್ರ ಬರೆದಿದ್ದೇನೆ.

ಶ್ರೀ ಬಿ.ಬಿ. ನಿಂಗಯ್ಯ:– ನಾವು 3–4 ಸಾರಿ ಬಂದು ಭೇಟಿ ಮಾಡಿ ಒತ್ತಾಯ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ, ಮಾನ್ಯ ಕುಮಾರಸ್ವಾಮಿಯವರೂ ಕೂಡ ಅಧ್ಯಕ್ಷರನ್ನು ಕೇಳಿಕೊಂಡಿದ್ದಾರೆ. ಈ ರೀತಿಯ affected areaದ MLA ಗಳನ್ನು ಕರೆದು, ಸರ್ವ ಪಕ್ಷಗಳ ಸಭೆ ಮಾಡಿ, ಒಂದು ತೀರ್ಮಾನಕ್ಕೆ ಬನ್ನಿ. ಆ ಒಂದು ಬದ್ಧತೆಯನ್ನು ಸರ್ಕಾರ ಪ್ರದರ್ಶನ ಮಾಡಬೇಕೆನ್ನುವ ವಿನಂತಿಯನ್ನು ನಾನು ತಮ್ಮ ಮೂಲಕ ಮಾಡುತ್ತೇನೆ. ಇಲ್ಲದೇ ಹೋದರೆ, 13 ಲಕ್ಷ ಎಕರೆ ಕಂದಾಯ ಭೂಮಿ ಮತ್ತು ಅರಣ್ಯ ಭೂಮಿ, ಎರಡು ಗುಂಟೆಯಲ್ಲಿ ಮನೆ ಕಟ್ಟಿಕೊಂಡಿದ್ದರೂ ಒಕ್ಕಲೆಬ್ಬಿಸಬೇಕೆಂದು ಕಾನೂನು technically ಹೇಳುತ್ತದೆ. Is it possible? Right to live ಎನ್ನುವ ಪ್ರಶ್ನೆ ಬರುತ್ತದೆ, ಅದು ಮೂಲಭೂತ ಹಕ್ಕು. ಅದನ್ನು ಹೇಳಲಿಕ್ಕೆ ಅವಕಾಶ ಇಲ್ಲಿಯೇ ಇರತಕ್ಕಂಥದ್ದು, ಅದಕ್ಕೆ ತಾವು ಇದರಲ್ಲಿ ಮೀನಾಮೇಷ ಎಣಿಸಿದರೆ ಹೇಗೆ? ನಾವು ಎಲೆಕ್ಟ್ ಆಗಿರುವುದು ಈ ರಾಜ್ಯದ ಜನರಿಂದ. ನ್ಯಾಯಾಲಯಕ್ಕೆ ಸತ್ಯ ಹೇಳುವುದಕ್ಕೆ ಭಯ ಏಕೆ? ನೀವು ಒಕ್ಕಲೆಬ್ಬಿಸುವುದಕ್ಕೆ ಬರುವುದಿಲ್ಲವೆಂದು ಹೇಳಿ. ಈ ಕೆಲಸ ಮಾಡುವ ಪ್ರಯತ್ನವನ್ನು ತಾವು ನ್ಯಾಯಾಲಯಕ್ಕೆ ಅಫಿಡವಿಟ್ ಕೊಡುವ ಮೂಲಕ ಮಾಡಬೇಕು, ರೈತರ ನೆರವಿಗೆ ಬರಬೇಕು. ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಅರಣ್ಯ ಇಲಾಖೆಗೆ ಸೇರಿದ ಸುಮಾರು 14 ಸಾವಿರ ಹೆಕ್ಟೇರ್ ಭೂಮಿಯನ್ನು ಯಾರ್ಯಾರು ಸುಮಾರು ಮೂರು ಜನರೇಷನ್ಸ್‌ನಿಂದ ಕೃಷಿ ಮಾಡಿಕೊಂಡಿದ್ದಾರೆ ಅವರಿಗೆ ಬಿಟ್ಟು ಕೊಡಬೇಕೆಂದು ಒತ್ತಾಯಿಸಿದಾಗ, ಭಾರತ ಸರ್ಕಾರ ಅರಣ್ಯ ಇಲಾಖೆ ಮತ್ತು ಪರಿಸರ ಇಲಾಖೆಯವರು ಅದಕ್ಕೆ ಬಿಟ್ಟು ಕೊಟ್ಟಿದ್ದಾರೆ. 4 ಸಾವಿರ ಹೆಕ್ಟೇರ್ ಮಾತ್ರ ವಿಲೇವಾರಿಯಾಗಿದೆ. ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ ಅದಕ್ಕೆ

ಇನ್ನೂ ಗ್ರಾಮ ಅರಣ್ಯ ಸಮಿತಿಗಳಾಗಿಲ್ಲ. ಬಹಳ ಕಡೆಗೆ ಇವರು ಇನ್ನೂ ಅರ್ಜಿಗಳನ್ನು ತೆಗೆದುಕೊಂಡಿಲ್ಲ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ನಿಂಗಯ್ಯನವರು ಈ ವಿಷಯವನ್ನು ಹಿಂದಿನ ವಿಧಾನ ಸಭೆಯಲ್ಲಿ ಪ್ರಸ್ತಾಪಿಸಿದಾಗ, ನಾನು ಕಂದಾಯ ಸಚಿವರು ಹಾಗೂ ಅರಣ್ಯ ಸಚಿವರೆಲ್ಲರೂ ಕುಳಿತುಕೊಂಡು ಸಾಕಷ್ಟು ಚರ್ಚೆ ಮಾಡಿದೆವು. ಆ ದಿವಸ ತಾವು ಕೂಡ ಬಂದಿದ್ದಿರಿ. ಈಗಾಗಲೇ ಅರಣ್ಯ ಎಂದು ಹೇಳಿದರೆ ಅರಣ್ಯದಲ್ಲಿ ಎಷ್ಟು ವಿಧ? ಕಾದಿಟ್ಟ ಅರಣ್ಯ ಬೇರೆ, protected forest, ಇವೆಲ್ಲಕ್ಕಿಂತಲೂ ಹೆಚ್ಚಾಗಿ ನಮಗೆ C & D Supreme Court ನ interpretation ಏನು, dictionary meaning ತೆಗೆದುಕೊಳ್ಳಿ ಎನ್ನುತ್ತಾರೆ. Total ಆಗಿ 18 ಲಕ್ಷ ಎಕರೆ ಅರಣ್ಯ ಭೂಮಿ ಎಂದು record ಆಗಿರುವುದು. ಅದರಲ್ಲಿ ವಾಸ್ತವಿಕವಾಗಿ ಮರ ಇರುವುದೆಷ್ಟು? ಏನು ಎನ್ನುವುದು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಬಿಡುಗಡೆಯಾಗಿಲ್ಲ. ನಾನಾ ರೀತಿಯಾದ ಆದೇಶಗಳಾಗಿವೆ. ಒಂದೊಂದು ಆದೇಶಕ್ಕೂ ಇನ್ನೊಂದು ಆದೇಶಕ್ಕೂ ತದ್ವಿರುದ್ಧವಾಗಿವೆ. ಆ ಕಾರಣಕ್ಕಾಗಿಯೇ ಸರ್ಕಾರ ಈಗಾಗಲೇ ಮಾನ್ಯ ನಿಂಗಯ್ಯನವರ ಸಮಸ್ಯೆಯನ್ನು ಬಗೆಹರಿಸುವುದರ ಹಿನ್ನೆಲೆಯಲ್ಲಿ ಇದೆಲ್ಲವೂ ಮೂಡಿ ಬಂದು C & D land ಅಂದರೆ ಏನೆಂದು ನಿರ್ದಿಷ್ಟಪಡಿಸತಕ್ಕಂಥದ್ದರ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಹೋಗಿ ವಾದ ಮಾಡಬೇಕೆನ್ನುವುದರ ಬಗ್ಗೆ ತೀರ್ಮಾನ ಮಾಡಿದ್ದೇವೆ. ಬಹುಶಃ 18 ಲಕ್ಷದಲ್ಲಿ ಇವರಿಗೇನಾದರೂ ಅರಣ್ಯ ಎಂದು ಉಳಿದುಕೊಂಡರೆ 4 ಲಕ್ಷ ಅಥವಾ 5 ಲಕ್ಷ ಮಾತ್ರ, ಉಳಿದಿದ್ದೆಲ್ಲಾ ಕಂದಾಯ ಭೂಮಿಗೆ ಕೊಡಬೇಕಾಗುತ್ತದೆ. ಏನಾಗಿದೆ ಎಂದರೆ, C & D land ಎಂದು ಹೇಳುತ್ತಾರೆ, 500 ವರ್ಷಗಳಿಂದಿರುವ ಊರುಗಳೂ ಸಹ C & D land, ಅವೂ ಅರಣ್ಯಗಳಾಗುತ್ತದೆ. So, ಈಗ ಆಗಿರತಕ್ಕಂಥದ್ದನ್ನು ನೀವು ಅರ್ಥ ಮಾಡಿಕೊಂಡಿದ್ದೀರಿ. ಇದನ್ನು ಹಿಂದೆಯೇ Supreme Court ಗೆ ಹೋಗಿ ಬಗೆಹರಿಸುವುದಕ್ಕೆ ಸಾಧ್ಯತೆ ಇತ್ತು. ಅದು ಆಗಿರಲಿಲ್ಲ, ಈಗ ನಾವು ಪ್ರಯತ್ನ ಮಡುತ್ತಿದ್ದೇವೆ. ನಿಮಗೆ ಸಹಾಯ ಮಾಡುವ ದೃಷ್ಟಿಯಿಂದ ಇದೆಲ್ಲ ಚಿಂತನೆ

ಮಾಡಿ ಮಾಡಿದ್ದೇವೆ. ನಿಮಗೆ ಆಶ್ವಾಸನೆ ಕೊಡುವುದು ಏನೆಂದರೆ, ನಿಮ್ಮ ಸಮಸ್ಯೆ ಏನು ಎಂಬುದು ಇದು ಸರ್ಕಾರದ ಗಮನದಲ್ಲಿದೆ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳು. ನಮ್ಮ ಉದ್ದೇಶ ಇರುವುದಿಷ್ಟೆ. ಇಂದು ದೇಶಕ್ಕೆ ಅನ್ನ ಕೊಡುವ ರೈತ, ನೂರಾರು ಎಕರೆ ಮಾಡಿರತಕ್ಕಂಥವರ ಬಗ್ಗೆ ನಾನು ಮಾತನಾಡುವುದಿಲ್ಲ. ಜೀವಕ್ಕಾಗಿ ಮಾಡಿಕೊಂಡಿರುವಂಥವರನ್ನು ಹೊರಗೆ ಹಾಕುವುದಿದೆಯಲ್ಲ ಅದು ಖಂಡಿತವಾಗಿಯೂ ಕೂಡ ಘನ ಘೋರ ಅನ್ಯಾಯವಾಗುತ್ತದೆ, ನ್ಯಾಯಾಲಯಕ್ಕೆ ಜನರ ಪರವಾಗಿ ಹೇಳುವ ಅಧಿಕಾರ ಸರ್ಕಾರಕ್ಕಿದೆ, ಹೀಗಾಗಿ ಅದನ್ನು ಹೇಳಬೇಕೆಂದು ಒತ್ತಾಯಿಸುತ್ತೇನೆ.

ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ಸಚಿವರು ಆಗ ಇದ್ದರು. ತಾವು ಹೇಳಿದ ಹಾಗೆ ನಾವಿಂದು ಹಳ್ಳಿಗಳಲ್ಲಿ ತಿರುಗಾಡುವ ಹಾಗೆ ಇಲ್ಲ. ಇದನ್ನು ತಾವು ಬಹಳ ಸಾರಿ ಜೋರಾಗಿ ಹೇಳಿದ್ದೀರಿ. ಇಲ್ಲಿ ಈಗ ಮಾನ್ಯ ಕಾನೂನು ಸಚಿವರಿದ್ದಾರೆ. ಅಲ್ಲಿ ಕೊಡುವ ಸಂಬಳದ ಬಗ್ಗೆ ಸನ್ಮಾನ್ಯ ಅಧ್ಯಕ್ಷರು ಹೇಳಿದರು. ಅವರಿಗೆ ಅಗತ್ಯವಾಗಿರತಕ್ಕಂಥ ನ್ಯಾಯವಾದ ಸಂಬಳ ಕೊಡಿ, ಖಂಡಿತವಾಗಲೂ ಬಂದು ಕೆಲಸ ಮಾಡುತ್ತಾರೆಂದು ಹೇಳಿದರು. ಅಲ್ಲಿಗೆ ನೇಮಕವಾದವರು, ಹಾಕಿದಂತಹವರು, ಯಾರೂ ಹೋಗಿ report ಮಾಡಿ ಕೊಳ್ಳದೆ ಹೋದರೆ, ಅವರ ಮೇಲೆ ಕ್ರಮ ತೆಗೆದುಕೊಂಡು ದಂಡ ಹಾಕುತ್ತೇವೆಂದು ಹೇಳಿದಿರಿ. ಇದರಿಂದಾಗಿ 15–20 ಕೋಟಿ ದಂಡ ಬಂದಿರುವುದು ಬಿಟ್ಟರೆ ಯಾರೊಬ್ಬ ಡಾಕ್ಟರ್‌ಗಳು ಹೋಗಿ report ಮಾಡಿಕೊಂಡಿಲ್ಲ. ಅದಕ್ಕೆ ಕಾನೂನಿಗೆ ತಿದ್ದುಪಡಿ ತನ್ನಿ. ಒಂದು ವರ್ಷ ಕಡ್ಡಾಯವಾಗಿ ಹಳ್ಳಿಯಲ್ಲಿ ಕೆಲಸ ಮಾಡಲೇಬೇಕೆಂದು ಹೇಳಿ. ಅವರು ಒಪ್ಪದೆ ಹೋದರೆ ಅವರ ಡಿಗ್ರಿ ವಾಪಸ್ ತೆಗೆದುಕೊಳ್ಳುತ್ತೇವೆ ಎನ್ನುವ ಕಾನೂನು ಮಾಡಿ ಏಕೆ ಆಗುವುದಿಲ್ಲ, ಖಂಡಿತವಾಗಿಯೂ ಹಳ್ಳಿಗಳಿಗೆ ಡಾಕ್ಟರ್‌ಗಳು ಹೋಗುತ್ತಾರೆ. ಅವರಿಗೆ ಕೊಡುವ ಸಂಬಳ ಕೂಡ ಜಾಸ್ತಿ ಮಾಡಬೇಕು.

ಅಧ್ಯಕ್ಷರು:– ಕಾನೂನು ಸಚಿವರೆ, ಆಸ್ಪತ್ರೆಗಳಿಗೆ ಡಾಕ್ಟರ್ಸ್ ಕೊಡುವ ವಿಚಾರದಲ್ಲಿ ಏನಾದರೂ ಒಂದು initiative ಮಾಡಿ. ನಾನು ಇದನ್ನು ಹಿಂದೆ ಹೇಳಿದ್ದೇನೆ. Medical College ಮಾಡುವ ಹೆಸರಿನಲ್ಲಿ ಅವರಿಗೆ separate pay-scale ಮಾಡಿ, ಇಲ್ಲಿ ಇದ್ದವರೆಲ್ಲ ಹೋಗಿ ಅಲ್ಲಿ ಸೇರಿಕೊಂಡಿದ್ದಾರೆ. ಈಗ equal pay-scale ಮಾಡಿದರೆ ಇಲ್ಲಿಗೆ ಬರುತ್ತಾರೆ, ದಯವಿಟ್ಟು initiate ಮಾಡಿ. ನಮಗೆ ಊರು ಕಡೆಗೆ ಮುಖ ಎತ್ತಿಕೊಂಡು ಹೋಗುವ ಹಾಗೆ ಇಲ್ಲ. ನಮ್ಮಲ್ಲಿ 11 ಆಸ್ಪತ್ರೆಗಳಿವೆ 2 ಆಸ್ಪತ್ರೆಗಳಲ್ಲಿ ಮಾತ್ರ ಇದ್ದಾರೆ, ಬಾಕಿ ಆಸ್ಪತ್ರೆಗಳಲ್ಲಿ ಒಂದೂ ಇಲ್ಲ. ಅದೇ ರೀತಿ ಎಲ್ಲಾ ಕಡೆ ಆಗಿದೆ.

ಶ್ರೀ ಬಿ.ಬಿ. ನಿಂಗಯ್ಯ:– ಹೌದು ಅಧ್ಯಕ್ಷರೆ, ನಾವು ಹಳ್ಳಿಗಳಿಗೆ ಹೋಗುವ ಹಾಗೆ ಇಲ್ಲ. ಜನರು ಬಾಯಿಗೆ ಬಂದ ಹಾಗೆ ಬಯ್ಯುತ್ತಾರೆ.

ಅಧ್ಯಕ್ಷರು:– ಹೌದು, ಏನ್ರೀ ಇಷ್ಟು ದಿವಸವಾಯಿತು ನಿಮಗೊಂದು ಡಾಕ್ಟರ್‌ಅನ್ನು ಹಾಕುವುದಕ್ಕೆ ಆಗುವುದಿಲ್ಲವೆ ಎಂದು ಕೇಳುತ್ತಾರೆ.

ಶ್ರೀ ಸಿ.ಟಿ. ರವಿ:– ಆರೋಗ್ಯ ಇಲಾಖೆಯ ಆರೋಗ್ಯ ಕೆಟ್ಟು ಹೋಗಿ ಬಹಳ ಕಾಲವಾಗಿದೆ. ಹಳೆಯ ರೋಗಿಯ ಕಥೆಯಾಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ:– Postmortem ಮಾಡುವುದಕ್ಕೂ ಡಾಕ್ಟರ್ ಇಲ್ಲ, ಇದು ಎಂಥ ಪರಿಸ್ಥಿತಿ ಎಂದರೆ ಬೇರೆ ತಾಲ್ಲೂಕಿನಿಂದ ಕರೆದುಕೊಂಡು ಬಂದು ಮಾಡಿಸಬೇಕು. P.M. ಮಾಡುವುದಕ್ಕೆ ಡಾಕ್ಟರ್ ಇಲ್ಲ.

ಅಧ್ಯಕ್ಷರು:– ಹೌದು, ಅದು ನಿಜ.

ಶ್ರೀ ಗೋವಿಂದ ಎಂ. ಕಾರಜೋಳ:– ಅದಕ್ಕೆ appointment ಮಾಡಲಿ, ಏನೂ ಆಗುವುದಿಲ್ಲ.

ಅಧ್ಯಕ್ಷರು:– ಇದಕ್ಕೆ ಏನಾದರೊಂದು ತೀರ್ಮಾನ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:- (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ತಾವು ಹೇಳಿದ ಹಾಗೆ ನಾವು ಕೊಡುವ ಸಂಬಳಕ್ಕೆ ಯಾರೂ ಬರುವುದಿಲ್ಲ. KPSC ನಲ್ಲಿ 500 ಜನ announce ಮಾಡಿದರೆ 250 ಜನ report ಮಾಡಿದರು, actually report ಮಾಡಿರುವುದು 120 ಜನ.

ಅಧ್ಯಕ್ಷರು:- Equal pay scale ಮಾಡದೇ ಹೋದರೆ ಬರಲ್ಲ.

ಶ್ರೀ ಟಿ.ಬಿ. ಜಯಚಂದ್ರ:- ಅಧ್ಯಕ್ಷರೆ, ತಾವು ಹೇಳಿದ್ದನ್ನು ನಾವು ಒಪ್ಪುತ್ತೇವೆ. ಇದನ್ನು ನಾನು ಆರೋಗ್ಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಈ ವಿಚಾರ ಪ್ರಸ್ತಾಪಿಸಿ ಚರ್ಚೆ ಮಾಡಿ ಇದಕ್ಕೇನಾದರೂ ಕೂಡ ಪರಿಹಾರ ಕಂಡು ಹಿಡಿಯುವುದಕ್ಕೆ ಪ್ರಯತ್ನಿಸುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಸಚಿವರು ತಿಳಿಸಿದ ಹಾಗೆ ಅವರು report ಮಾಡದಿರುವುದಕ್ಕೆ ಏನು ಕಾರಣ ಎಂದರೆ, ಮೊದಲನೆಯದಾಗಿ ಇವರು counselling ಮುಖಾಂತರ ಅವರಿಗೆ posting ಕೊಡುತ್ತಾರೆ. ಆ ರೀತಿ ಮಾಡಿದರೆ ಡಾಕ್ಟರ್ಸ್ ಬರುವುದಿಲ್ಲ. ಅವರು ಕೇಳಿದ ಕಡೆಗೆ ಕೊಟ್ಟರೆ ಬರುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ:- ಬೆಂಗಳೂರಿಗೆ ಬರುತ್ತಾರೆ ಆದರೆ ಹಳ್ಳಿಗಳಿಗೆ ಯಾರೂ ಹೋಗುವುದಿಲ್ಲ. ಅದು ಬಂದಿರುವ ಸಮಸ್ಯೆ.

ಶ್ರೀ ಗೋವಿಂದ ಎಂ. ಕಾರಜೋಳ:- ನೋಡಿ ನಾನು ಏನು ಹೇಳುತ್ತೇನೆಂದರೆ, counselling ರದ್ದು ಮಾಡಿಬಿಡಿ. At least 50% doctors ನಮ್ಮ ಹಳ್ಳಿಗಳಲ್ಲಿ ನಮಗೆ ಸಿಗುತ್ತಾರೆ. ಮುಧೋಳ್‌ದವನನ್ನು ತೆಗೆದುಕೊಂಡು ಬಂದು ಕೋಲಾರಕ್ಕೆ ಹಾಕಿದರೆ ಅವರು ಬರುವುದಿಲ್ಲ. ಏಕೆಂದರೆ, ಅವನು ದಿನ ಅಲ್ಲಿಯೇ ಕುಳಿತು ಇಂಜೆಕ್ಷನ್ ಮಾಡಿ 2000/- ದುಡಿಯುತ್ತಾನೆ. ಅದಕ್ಕೆ ಆ ತರಹ ಮಾಡಬೇಡಿ. ಅವರಿಗೆ counselling ವ್ಯವಸ್ಥೆ ತೆಗೆದು ಬಿಡಿ. ಮೊದಲು ಯಾವ ರೀತಿ transfers ಇತ್ತೋ ಆ ರೀತಿ ಮಾಡಿ. ಅವರವರ request ಮೇಲೆ ಕೊಟ್ಟರೆ ಹೋಗಿ join ಆಗುತ್ತಾರೆ. At least 50% ನಷ್ಟು ಡಾಕ್ಟರ್ಸ್ ನಮ್ಮ PHC ಗಳಲ್ಲಿ ಸಿಗುತ್ತಾರೆ.

ಅಧ್ಯಕ್ಷರು:– Counselling ಬೇಡ್ರಿ.

ಶ್ರೀ ಗೋವಿಂದ ಎಂ. ಕಾರಜೋಳ:– ಎರಡನೆಯದಾಗಿ, 2–3 ಕೋಟಿ ಖರ್ಚು ಮಾಡಿ ಡಿಗ್ರಿ ಸರ್ಟಿಫಿಕೇಟ್ ತೆಗೆದುಕೊಂಡು ಬಂದಿರುವವನು ನೀವು ಕೊಡುವ 20 ಸಾವಿರ ಸಂಬಳಕ್ಕೆ ಯಾರು ಏಕೆ ಬರುತ್ತಾರೆ? Clerk ಬರುವುದಿಲ್ಲ, ಬೆಂಗಳೂರಿನಲ್ಲಿ call center ನಲ್ಲಿ ಕೆಲಸ ಮಾಡುವ telephone operator ಬರುವುದಿಲ್ಲ. ಡಾಕ್ಟರ್ಸ್ ಹೇಗೆ ಬರುತ್ತಾರೆ?

ಶ್ರೀ ಸಿ.ಟಿ. ರವಿ:– 1% ಬಡ್ಡಿ work out ಮಾಡಿದರೂ ನೀವು ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕು.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಇದನ್ನು ಬಗೆಹರಿಸಿ. ಈಗ ನೀವು ಎಲ್ಲಾ ಇದ್ದೀರಿ. ಅವನು medical college ನಲ್ಲಿ ಇದ್ದಾನೆ, ಅವನು MD ಪಾಸ್ ಮಾಡಿದ್ದಾನೆ, ಅವನಿಗೆ 60 ರಿಂದ 70 ಸಾವಿರ ಸಂಬಳ ಕೊಡುತ್ತಾರೆ. ಇಲಾಖೆಯಲ್ಲಿ ಇವರಿಗೇನು ನೀವು ಕೊಡುತ್ತೀರಿ? 32 ಸಾವಿರ ರೂಪಾಯಿ ಕೊಡುತ್ತೀರಿ. ಯಾರಾದರೂ ಬರುತ್ತಾರೆಯೆ? Equal pay scale ಮಾಡಿ ನೋಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– Lecturersಗೆ ಒಂದೂಕಾಲ ಲಕ್ಷ ಸಂಬಳ ಕೊಡುತ್ತಿದ್ದಾರೆ. ಮೂರು ಕೋಟಿ ಖರ್ಚು ಮಾಡಿ ಓದಿರುವಂಥವನಿಗೆ 30 ಸಾವಿರ ಸಂಬಳ ಕೊಟ್ಟರೆ ಯಾರು ಬರುತ್ತಾರೆ? ದಯಮಾಡಿ ವಾಸ್ತವವನ್ನು ಅರ್ಥ ಮಾಡಿಕೊಳ್ಳಿ. Class - IV employee ಗೆ ಇವರು counselling ಮಾಡಿದ್ದಾರೆ. ಅವನು ಬರೀ ಬೆಂಗಳೂರನ್ನು ಆಯ್ಕೆ ಮಾಡಿಕೊಂಡಿದ್ದಾನೆ. ಒಬ್ಬನೂ ಹಳ್ಳಿಗೆ ಬರುವುದಿಲ್ಲ.

ಅಧ್ಯಕ್ಷರು:– ಅದನ್ನು ಮಾಡದಿರಿ. ನರ್ಸ್‌ಗಳಿಗೆ ನೀವು ಏನು ಮಾಡುವುದಕ್ಕೆ ಹೊರಟಿದ್ದಿರಿ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ನೀವು ಬಿಲ್ ತನ್ನಿ, ನಾವು approve ಮಾಡಿ ಕೊಡುತ್ತೇವೆ.

ಅಧ್ಯಕ್ಷರು:– ಇದಕ್ಕೆ permanent solution ಎಂದರೆ, ಮೊದಲು ಎಲ್ಲಾ vacancy fill ಆಗಲಿ. ನಂತರ convenience ಮೇಲೆ inconvenient ಆಗಿದ್ದರೆ ಮಾಡಬಹುದು. ಅದು ಬಿಟ್ಟು ಈ ರೀತಿ ಮಾಡಿದರೆ ಹೇಗೆ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ನಮ್ಮ ಮತಕ್ಷೇತ್ರಗಳಿಗೆ ಹೋಗುವ ಹಾಗೆ ಇಲ್ಲ ಅಷ್ಟು ತೊಂದರೆಯಾಗಿದೆ. ನಿಮ್ಮ ಕೈಯಲ್ಲಿ ಒಬ್ಬ ಡಾಕ್ಟರ್, ಒಬ್ಬ peon ಹಾಕಿಸುವುದಕ್ಕೆ ಆಗುವುದಿಲ್ಲವಲ್ಲ ಎನ್ನುತ್ತಾರೆ. ಸಕಲೇಶಪುರದಲ್ಲಿ Crawford Hospital ನಲ್ಲಿ 33 ರಲ್ಲಿ 24 ಖಾಲಿ ಇದೆ ಜನಕ್ಕೆ ನಾವೇನು ಉತ್ತರ ಹೇಳೋಣ?

ಅಧ್ಯಕ್ಷರು:– ಬಹಳ ತೊಂದರೆಯಿದೆ.

ಡಾ॥ ಕೆ. ಶ್ರೀನಿವಾಸ ಮೂರ್ತಿ:– ಇದು computer science ಮುಗಿಸಿದಂತಹವರಿಗೆ ಒಂದೂವರೆ ಲಕ್ಷ ಸಂಬಳ ಕೊಡುತ್ತಾರೆ. ನಾನು ಕೂಡ ಸರ್ಕಾರಿ ಸೇವೆಯಿಂದ VRS ತೆಗೆದುಕೊಂಡಿದ್ದು ನನಗೀಗ 6 ಸಾವಿರ ಮಾತ್ರ pension ಬರುತ್ತಿದೆ. 18 ವರ್ಷಗಳ ಕಾಲ ನಾನು service ಮಾಡಿ ನನಗೆ ಬರೀ 6 ಸಾವಿರ pension ಬರುತ್ತಿದೆ. ಡಾಕ್ಟರ್‌ಗೆ 25 ಸಾವಿರ ಸಂಬಳ ಕೊಟ್ಟರೆ ಯಾವ ವೈದರೂ ಬರುವುದಿಲ್ಲ. ಇಲ್ಲಿ ಎರಡು ನ್ಯೂನತೆಗಳಿವೆ. (1) counselling (2) ಅವರನ್ನು ಜಿಲ್ಲಾ ಪಂಚಾಯತ್ ವಶಕ್ಕೆ ಕೊಟ್ಟಿರುವುದು. ಇವೆರಡನ್ನೂ ತೆಗೆದರೆ ನಿಜವಾಗಿಯೂ ವೈದ್ಯರು ಮುಂದೆ ಬರುತ್ತಾರೆ. ನಮ್ಮ ಹಳ್ಳಿಗಳ ಉದ್ಧಾರವಾಗುತ್ತವೆ.

ಶ್ರೀ ಸಿದ್ದು ಬಿ. ನ್ಯಾಮಗೌಡ:– ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆಸ್ಪತ್ರೆಗಳನ್ನು ಕಟ್ಟಿಸುತ್ತಾರೆ. ನೂರಾರು ಕೋಟಿ ಖರ್ಚು ಮಾಡಿ equipment ತರಿಸುತ್ತಾರೆ. ಅಲ್ಲಿ ಡಾಕ್ಟರ್ಸ್ ಇರುವುದಿಲ್ಲ. ಅದು ಏನು ಉಪಯೋಗವಾಗುತ್ತದೆ ನೀವೇ ಹೇಳಿ.

ಅಧ್ಯಕ್ಷರು:– ನೀವು ಇದುವರೆಗೆ ಏಕೆ ಬಾಯಿ ಬಿಡಲಿಲ್ಲ?

ಶ್ರೀ ಸಿದ್ದು ಬಿ. ನ್ಯಾಮಗೌಡ:– ಸ್ವಲ್ಪ ಅವರಿಗೆ ಸ್ಯಾಲರಿ ಹೆಚ್ಚು ಮಾಡಿದರೆ ಬರುತ್ತಾರೆ. ಹೀಗಾಗಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳೆಲ್ಲವೂ ಬಂದ್ ಆಗಿವೆ. ತುಂಬಾ ಬಡವರಿಗೆ ಬಹಳ ತೊಂದರೆಯಾಗಿದೆ, ಅದಕ್ಕೆ ಕೂಡಲೇ ಅವರಿಗೆ ಆದಷ್ಟು ಸ್ಯಾಲರಿ ಹೆಚ್ಚು ಮಾಡಿ ಅನುಕೂಲಗಳನ್ನು ಮಾಡಿ ಕೊಟ್ಟರೆ ಮಾತ್ರ ಡಾಕ್ಟರ್ಸ್ ಬರುತ್ತಾರೆ. ಅದನ್ನು ತಾವು ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು:– ಈಗಿರುವ ಸ್ಥಿತಿ ಹಾಗೆಯೇ ಇದೆ. ಇಲ್ಲವೆಂದರೆ ಆಸ್ಪತ್ರೆಗಳನ್ನು ಮುಚ್ಚಬೇಕು.

ಶ್ರೀ ಪಿ.ಎಂ. ನರೇದ್ರಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಣ್ಣ clarification. ಎಲ್ಲರೂ ಮಾತನಾಡುತ್ತಿದ್ದಾರೆ. ಮೂಲಕ್ಕೆ ಯಾರೂ ಮಾತನಾಡುತ್ತಿಲ್ಲ.

ಅಧ್ಯಕ್ಷರು:– ಏನು ಹೇಳಿ.

ಶ್ರೀ ಪಿ.ಎಂ. ನರೇದ್ರಸ್ವಾಮಿ:– Indian Education System ನಲ್ಲಿ IQ test ಆಗುವುದು ನಮ್ಮಲ್ಲಿ (1) SSLC ಹಂತದಲ್ಲಿ. (2) II PUC ಹಂತದಲ್ಲಿ. SSLC ನಲ್ಲಿ highest marks ತೆಗೆದುಕೊಂಡವರು science ಗೆ opt ಮಾಡಿಕೊಂಡು ಹೋಗಿಯೇ ಹೋಗುತ್ತಾರೆ. ಇದರ ನಂತರ average ನಲ್ಲಿ ಬಂದವರು Commerce, Arts, Diploma, ಈ ಕಡೆಗೆ ಹೋಗುತ್ತಿದ್ದಾರೆ. II PUC ಯಲ್ಲಿ Science ನಲ್ಲಿ top ಅಂತ ಪಡೆದವರು, ಎಂದರೆ creamy layer ಯಾರು ಇದ್ದಾರೆ. ಅವರು medical option ತೆಗೆದುಕೊಳ್ಳುತ್ತಾರೆ. ದೇಶದಲ್ಲಿ ಇವತ್ತು ಆಡಳಿತ ಯಾವ ರೀತಿ ನಡೆಯುತ್ತದೆ ಎಂದರೆ, top rank students ಯಾರು ಇದ್ದಾರೋ ಪ್ರಥಮ ಹಂತದಿಂದ ವಿದ್ಯಾಭ್ಯಾಸದಲ್ಲಿ ಯಾರು ಹೆಚ್ಚು ಅಂಕ ಪಡೆದಿದ್ದಾರೋ ಅವರು least marks, average marks ನಲ್ಲಿ ಬರುತ್ತಿದ್ದರಲ್ಲ ಅವರ ಕೈ ಕೆಳಗೆ ಕೆಲಸ ಮಾಡುವವರು ಆಗಿದ್ದಾರೆ. ಇವತ್ತು ನಮ್ಮಲ್ಲಿ ಬಹುತೇಕ IAS, IPS officers, ನಾನು ಯಾರನ್ನೂ underestimate ಮಾಡಿ ಮಾತನಾಡುತ್ತಿಲ್ಲ. ನಮ್ಮ ದೇಶದಲ್ಲಿಂದು ಆ ಒಂದು

average students ಗಳೇ IAS/IPS ಗಳಾಗಿ ಬಂದಿರುವುದು. ವೈದ್ಯರುಗಳನ್ನು ನಾವು ಯಾವ ರೀತಿ ಕಾಣುತ್ತೇವೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಾಗಿಲ್ಲ. ತಾವು ಇದರ ಬಗ್ಗೆ ಬೆಳಕು ಚೆಲ್ಲಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ:- ಬಹಳ ಉಪಯುಕ್ತವಾದ ಸಲಹೆಗಳನ್ನು ನಮ್ಮ ಸ್ನೇಹಿತರು ಕೊಟ್ಟಿದ್ದಾರೆ. ನಮ್ಮ ಕುಮಾರಸ್ವಾಮಿಯವರು ಹೇಳಿದ ಹಾಗೆ, ಒಬ್ಬ ಬೆಸ್ಕಾಂ ಲೈನ್‌ಮನ್‌ಗೆ 34 ಸಾವಿರ ಸಂಬಳ ಬರುತ್ತದೆ, ಡಾಕ್ಟರ್‌ಗೆ ಅಷ್ಟು ಸಂಬಳ ಕೊಟ್ಟರೆ ಯಾರು ಬರುತ್ತಾರೆ.? ಆದ್ದರಿಂದ, ಈ ವಿಚಾರ ಬಹಳ ಗಂಭೀರವಾಗಿ ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಈ ವಿಷಯವನ್ನು 9 ತಿಂಗಳುಗಳಿಂದಲೂ ಚರ್ಚೆ ಮಾಡುತ್ತಿದ್ದೇವೆ. But you did not arrive at a solution. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಂಡಿಲ್ಲವೆಂದು ನಮಗೆ ವೇದ್ಯವಾಗುತ್ತದೆ. ನನಗೆ ಅನ್ನಿಸುತ್ತದೆ, ಮೊದಲು ತಾವೀಗ mobil hospital start ಮಾಡಿ ಇಂತಿಂಥ date ಗಳಲ್ಲಿ ಬರುತ್ತೇವೆಂದು ಹೇಳಿದರೆ ಜನರು ಅಲ್ಲಿಗೆ ಹೋಗುತ್ತಾರೆ. Mobile hospital ಅನ್ನು start ಮಾಡಿ ಇಲ್ಲವೆಂದರೆ ಈ hospital ಅನ್ನು ಮುಚ್ಚಿ ಎನ್ನುವ ಧ್ವನಿ ಇಂದು ಕೇಳಿ ಬರುತ್ತಿದೆ. ಆದ್ದರಿಂದ, ಸರ್ಕಾರ ಇದನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಳ್ಳಬೇಕು. ಆದಷ್ಟು ಬೇಗನೆ ಆಸ್ಪತ್ರೆಗಳಿಗೆ ವೈದ್ಯರು ಬೇಕಾಗಿದೆ. ನಮ್ಮ ಸ್ನೇಹಿತರಾದ ಕಾರಜೋಳರವರು ಹೇಳಿದ ಹಗೆ, ಮೊದಲು ಆ counselling ವ್ಯವಸ್ಥೆಯನ್ನು ವಜಾ ಮಾಡಿ. ಇದನ್ನು ಮಾಡಿ ತಾವು ಮೊದಲು ಯಾವ ರೀತಿಯಲ್ಲಿ ಡಾಕ್ಟರ್ಸ್ ಟ್ರಾನ್ಸ್‌ಫರ್ ವ್ಯವಸ್ಥೆ ಇಟ್ಟುಕೊಂಡಿದ್ದೀರಿ ಅದನ್ನು ಉಳಿಸಿಕೊಳ್ಳಿ. ಸರ್ಕಾರ ಅದನ್ನು ಮಾಡದೇ ಹೋದರೆ ಸರ್ಕಾರ ಇದ್ದು ಇಲ್ಲದ ಹಾಗೆ ಆಗುತ್ತದೆ. ಅದನ್ನು ಮಾಡಬೇಕೆಂದು ತಾಕೀತು ಮಾಡುತ್ತೇನೆ. ಇಂದು ಹಳ್ಳಿ ವೃದ್ಧರ ಭಾರತ ಆಗುತ್ತಿದೆ. ಎಲ್ಲಾ ಹುಡುಗರು ಇಂದು ನಗರ ಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ. Global Investors Meet ಎಂದು ಕಳೆದ 10-15 ವರ್ಷಗಳಿಂದ ಮಾಡುತ್ತಲೇ ಇದ್ದಾರೆ. ಅದಕ್ಕೆ ಪೂರಕವಾಗಿ RIM ಮಾಡಿ.

ಶ್ರೀ ಜಿ.ಹೆಚ್. ಶ್ರೀನಿವಾಸ:- ಇಂದು ವೈದ್ಯರುಗಳಿಗೆ night duty, court duty, PM ಮಾಡುವುದು, ಮತ್ತಿತರ ಕೆಲಸಗಳಿಗೆ ಕಳುಹಿಸುತ್ತಿರುವುದರಿಂದ ವೈದ್ಯರು ಕೆಲಸ ಮಾಡಲಿಕ್ಕಾಗುತ್ತಿಲ್ಲ. MD, MS, ಮಾಡಿರತಕ್ಕಂಥವರು night duty ಮಾಡಬೇಕು, ಹೀಗಾಗಿ ಅವರು ಬೆಳಗ್ಗೆ duty ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ, ಈ night duty, court ಕೆಲಸ, PM ಮಾಡುವುದು ಇಂಥವೆಲ್ಲ ತಪ್ಪಿಸಿ ಬರೀ MBBS ಮಾಡಿದ ಡಾಕ್ಟರ್‌ಗಳಿಗೆ ಈ ಕೆಲಸ ಕೊಟ್ಟು Post-Graduaiton ಮಾಡಿದ ವೈದ್ಯರುಗಳಿಗೆ ಕೇವಲ patient ನೋಡುವುದು, operation ಮಾಡುವುದು, ಇಂಥ ಕೆಲಸಗಳಿಗೆ ವಹಿಸಿದರೆ ಇನ್ನೂ ಕೂಡ ಹೆಚ್ಚು ವೈದ್ಯರು ಸರ್ಕಾರಿ ಸೇವೆ ಸಲ್ಲಿಸಲಿಕ್ಕೆ ಬರುತ್ತಾರೆ. ಆಗ ಖಂಡಿತವಾಗಿಯೂ ವೈದ್ಯರು ಬರದೆ ಇರುವ ಸಮಸ್ಯೆ ಕಡಿಮೆಯಾಗುತ್ತದೆ ಎನ್ನುವುದು ನನ್ನ ಭಾವನೆ.

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಕಾನೂನು ಸಚಿವರೆ, ನಾನು SC-ST Welfare committee ಯಲ್ಲಿದ್ದೇನೆ. ಚರ್ಚೆ ಮಾಡುವಾಗ, ಇಂದು ಹಳ್ಳಿಗಳು ವೃದ್ಧರ ಭಾರತವಾಗುತ್ತಿದೆ. ನಮ್ಮ ಎಲ್ಲಾ youngsters ಉದ್ಯೋಗ ಹುಡುಕಿಕೊಂಡು ನಗರಗಳಿಗೆ ವಲಸೆ ಬರುತ್ತಿದ್ದಾರೆ. ಅದಕ್ಕೆ GIM concept ರೀತಿಯಲ್ಲಿಯೇ RIM (Rural Investors Meet) ಮಾಡಿ. ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ತೆರದು ಅಲ್ಲಿನ ಯುವಕರಿಗೆ ಅಲ್ಲಿಯೇ ಕೆಲಸ ಕೊಡುವ ಆಲೋಚನೆ ಸರ್ಕಾರಕ್ಕೆ ಬರಬೇಕು. ಇಷ್ಟು ವರ್ಷಗಳಿಂದ ಎಲ್ಲಾ ಬೆಂಗಳೂರನ್ನು centralize ಮಾಡುತ್ತಿದ್ದೀರಿ. ಇಲ್ಲಿ ಒಂದುಕಾಲು ಕೋಟಿ ಜನಸಂಖ್ಯೆಯಾಗಿದೆ. ಪೀಕ್ ಅವರ್ಸ್‌ನಲ್ಲಿ ಸುಮಾರು ಒಂದು ಕಿ.ಮೀ. ಪ್ರಯಾಣಿಸುವುದಕ್ಕೆ ಅರ್ಧಗಂಟೆ ಸಮಯ ಬೇಕು. ಈ ದೃಷ್ಟಿಯಿಂದ on par with GIM RIM ಎಂದು ಮಾಡಿ. ಇದನ್ನು ಮಾಡಿ ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ತೆರೆಯುವುದರ ಮೂಲಕ ಅಲ್ಲಿಗೆ ಒತ್ತು ಕೊಡಿ, ಹಳ್ಳಿಗಳು ಉದ್ಧಾರವಾಗುತ್ತವೆ, ಅಲ್ಲಿಯ ಜನರೂ ಕೂಡ ಅಲ್ಲಿಯೇ ಉಳಿಯುತ್ತಾರೆ, ಯುವಕರಿಗೆ ಕೆಲಸ ಸಿಗುತ್ತದೆ, ಹಳ್ಳಿಗಳ ಆರೋಗ್ಯ ಸುಧಾರಣೆಯಾಗುವುದರ ಜೊತೆಗೆ ಅಭಿವೃದ್ಧಿಯೂ ಆಗುತ್ತದೆ. ಇದನ್ನು ಮಾಡಬೇಕು. ಏಕೆಂದರೆ,

Industriesಗೆ ಈ ಸಾರಿ ಬಜೆಟ್‌ನಲ್ಲಿ ಒತ್ತು ಕೊಟ್ಟು ಹೇಳಿಲ್ಲ. That has to be done. ಇವತ್ತು ಬಹಳಷ್ಟು ಓದಿಕೊಂಡಿರುವ ಹಳ್ಳಿ ಹುಡುಗರಿಗೆ ನಾವು ಉದ್ಯೋಗ ಕೊಡಬೇಕಾಗುತ್ತದೆ. ನಾನು ಇಲ್ಲಿ ನೋಡುತ್ತೇವೆ, ಎಲ್ಲಾ ಇಲ್ಲಿ ಪೀಣ್ಯದಲ್ಲಿ ಬಂದು ಆ ತಗಡುಗಳನ್ನು ಹಾಕಿರುವ ಮನೆಯಲ್ಲಿ ವಾಸ ಮಾಡುತ್ತಾರೆ. ಹಳ್ಳಿಯಲ್ಲಿರುವ ತಂದೆ-ತಾಯಿಯವರು, ನಮ್ಮ ಮಗ ಬೆಂಗಳೂರಿನಲ್ಲಿದ್ದಾನೆಂದು ತಿಳಿದುಕೊಳ್ಳುತ್ತಾರೆ. ಎಂತದೂ ಇಲ್ಲ. ಆ ದೃಷ್ಟಿಯಿಂದ ಆ ತರಹದ ಒಂದು ಆಲೋಚನೆ ಆಗಬೇಕು. ಇದರ ಜೊತೆಗೆ ಸುವರ್ಣ ಗ್ರಾಮ ಯೋಜನೆಯ ಬಗ್ಗೆ ಬೆಳಿಗ್ಗೆ ನಮ್ಮ ಸ್ನೇಹಿತರೊಬ್ಬರು ಮಾತನಾಡುತ್ತಾ ಹೇಳಿದ್ದಾರೆ. ಅದು ಇಲ್ಲವೇ ಇಲ್ಲ. ಈಗ ಗ್ರಾಮ ವಿಕಾಸ ಯೋಜನೆ ಎಂದು ಹೇಳಿ ಕಳೆದ ವರ್ಷ ಕೊಡಲಿಲ್ಲ, ಈಗ ಮೂರು ವರ್ಷಕ್ಕೆ ಐದು ಹಳ್ಳಿಗಳನ್ನು ಸೇರಿಸಿ ಕೊಡುತ್ತೇವೆಂದು ಹೇಳಿದಿರಿ. ಇದು ಅಭಿವೃದ್ಧಿ ಪರವಾದ ಯೋಜನೆ ಆಗುವುದಿಲ್ಲ. ತಾವೆಲ್ಲರೂ ಹಿರಿಯರಿದ್ದೀರಿ, ಗ್ರಾಮೀಣ ಪ್ರದೇಶದಿಂದ ಬಂದವರಿದ್ದೀರಿ, ಆ ಪ್ರದೇಶದ ಅಭಿವೃದ್ಧಿಗೆ ಪ್ರತಿ ವರ್ಷ ಕನಿಷ್ಠ ಹತ್ತು ಹತ್ತು ಹಳ್ಳಿಗಾದರೂ ಕೊಡಿ. ಹಳ್ಳಿಗಳು ಉದ್ಧಾರವಾಗಲಿ. ಏಕೆಂದರೆ, 1073 ಹಳ್ಳಿಗಳೆಂದು ಕುಮಾರಸ್ವಾಮಿಯವರು ಹೇಳಿದರು. ನನ್ನ ಕ್ಷೇತ್ರದಲ್ಲಿ ಬಂದಿರುವ ಹಳ್ಳಿಗಳು ಬಹಳ ದೊಡ್ಡದಾದ ವಿಸ್ತಾರ ಹೊಂದಿದ್ದು, ಒಂದೊಂದು ಎಂಪಿ ಕ್ಷೇತ್ರದಷ್ಟು ನನ್ನ ಕ್ಷೇತ್ರವಿದೆ. ಅಲ್ಲಿಗೆ ಹಣ ಎಲ್ಲಿಂದ ನಾನು ತಂದು ಕೊಡಲಿ? ನಮ್ಮ ಹಳ್ಳಿಯ ಜನಕ್ಕೆ ಏನು ಉತ್ತರ ಕೊಡಲಿ? ನಿಮಗೆ ಗೊತ್ತಿರುವಂತೆ ಗ್ರಾಮ ಸಭೆಗಳಿಗೆ ಇಂದು ಜನ ಬರುತ್ತಿಲ್ಲ. ಅದೇ ರೀತಿಯಾಗಿ ನಾಳೆ ಎಂಎಲ್‌ಎ ಸಭೆಗಳಿಗೂ ಜನ ಬರದಿರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆ ದೃಷ್ಟಿಯಿಂದ ಇವುಗಳಿಗೆ ಒತ್ತು ಕೊಟ್ಟು ಮಾಡಿ. ನೀವು ಏನಾದರೂ ಹೆಸರುಗಳನ್ನು ಇಟ್ಟುಕೊಳ್ಳಿ. ಗ್ರಾಮ ವಿಕಾಸ ಯೋಜನೆಯಲ್ಲಿ ಹೆಚ್ಚಿಗೆ ಕೊಡಿ. ಹಾಗೆ ನಮ್ಮ ಗ್ರಾಮ ನಮ್ಮ ರಸ್ತೆ ಇದರಲ್ಲಿ 20 ಕಿ.ಮೀ. ಗೆ ಎಂದು ಇದೆ ಇದನ್ನು 30 ಕಿ.ಮೀ.ಗೆ ಹೆಚ್ಚು ಮಾಡಿ ಅನುಕೂಲ ಮಾಡಿ ಕೊಡಿ ಎಂದು ಹೇಳುತ್ತಾ ಕೊನೆಯದಾಗಿ, ಅನ್ನಭಾಗ್ಯ ಇದರಲ್ಲಿ ಎಷ್ಟೆಲ್ಲಾ ದೂರುಗಳು ಬಂದಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆ.

ನನಗೆ ತಿಳಿದು ಬಂದ ಹಾಗೆ, ಪಟ್ಟಣದೊಳಗೆ ಒಂದು ತಿಂಗಳೊಳಗೆ ಒಬ್ಬ ವ್ಯಾಪಾರಿಗೆ 2 ರಿಂದ 3 ಲೋಡು ಅಕ್ಕಿ ಮಾರಾಟವಾಗುತ್ತಿದೆ. ಅವನು 12 ರೂಪಾಯಿಗೆ ಒಂದು ಕೆ.ಜಿ.ಯಂತೆ ತೆಗೆದುಕೊಂಡು ಆ ಅಕ್ಕಿಗೆ ಅವನು ಡಬ್ಬಲ್ ಪಾಲಿಶ್ ಮಾಡಿ ಅಲ್ಲಿಯೇ ತೆಗೆದುಕೊಂಡು ಅಲ್ಲಿಯೇ ಮಾರಾಟ ಮಾಡುತ್ತಾನೆ. ಇದಕ್ಕೆ ನನ್ನದೊಂದು ಸಲಹೆ ಇದೆ. ಇವತ್ತು ಎಲ್.ಪಿ.ಜಿ.ಗ್ಯಾಸ್‌ನ ಯಾರು ಖಾತೆದಾರರು ಇದ್ದಾರೆ ಆ consumer ಹೆಸರಿಗೆ ಕೇಂದ್ರ ಸರ್ಕಾರ ಇವತ್ತು ಹಣ ಜಮಾ ಮಾಡುವಂಥ ಕೆಲಸವನ್ನು ಮಾಡಿದೆ. ಹಾಗೆ ದುರುಪಯೋಗವಾಗುವುದು ಬೇಡ. ಅವರು ಮಾರಿಕೊಂಡು ಬೇರೆ ಅಕ್ಕಿಯನ್ನು ಕೊಳ್ಳುವುದು ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಬ್ಸಿಡಿ ಬಗ್ಗೆ ಏನು ಮಾಡುತ್ತಿದೆ? ಬಿ.ಪಿ.ಎಲ್. ಕಾರ್ಡುದಾರರ ಖಾತೆಗೆ ಆ ಹಣವನ್ನು ಜಮಾ ಮಾಡುವುದರ ಮೂಲಕ ಇವತ್ತು ಆ ಹಣ ದುರುಪಯೋಗವಾಗತಕ್ಕಂಥದ್ದು ಅಥವಾ ಮಾರಾಟವಾಗತಕ್ಕಂಥದ್ದು. ಅನ್ಯಾಯವಾಗುವುದನ್ನು ತಡೆಯುವುದಕ್ಕೆ ಎಲ್ಲವೂ ಸಾಧ್ಯವಾಗುತ್ತದೆ. ನೇರವಾಗಿ ಅವನ ಖಾತೆಗೆ ಹೋಗುತ್ತದೆ. ನೀವು 24–25 ರೂ.ಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಬೇರೆ ಕಡೆಯಿಂದ ತರಿಸುತ್ತಿದ್ದೀರಿ. ಅದು ಬೇಕಾಗಿಲ್ಲ, ಇಲ್ಲಿಯೇ ಜನ 4–5 ರೂ.ಗಳನ್ನು ಜಾಸ್ತಿ ಕೊಟ್ಟು ತಮಗೆ ಬೇಕಾದ ಅಕ್ಕಿಯನ್ನು ಕೊಂಡುಕೊಳ್ಳುತ್ತಾರೆ. ಆದ್ದರಿಂದ ಸರ್ಕಾರ ಆ ರೀತಿ ಆಲೋಚನೆ ಮಾಡತಕ್ಕಂಥದ್ದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಡಾ॥ ದೇವರಾಜ ಅರಸು ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ನಿಗಮ, ಅದರ ಬಗ್ಗೆ ತಮಗೆ ಗೊತ್ತಿದೆ. 100–200 ಜನರಿಗೆ ಅವಕಾಶ ಇರುತ್ತದೆ. ಸಾವಿರಾರು ಅರ್ಜಿಗಳು ಬರುತ್ತವೆ. ಅದರ ಬಗ್ಗೆ ಒಂದು ಸರ್ವೆ ಆಗಲಿ. ಎಷ್ಟು ಜನ ಬಡವರಿದ್ದಾರೆ, ಎಷ್ಟು ಜನರಿಗೆ ಗಂಗಾ ಕಲ್ಯಾಣ ಯೋಜನೆ ಬೇಕು. ವ್ಯಾಪಾರಕ್ಕೆ ಎಷ್ಟು ಜನರಿಗೆ ಬೇಕು. ಬೇರೆ ಬೇರೆಯದ್ದಕ್ಕೆ ಎಷ್ಟು ಬೇಕು ಎನ್ನುವುದರ ಬಗ್ಗೆ ಒಂದು ಸರ್ವೆ ರಿಪೋರ್ಟ್ ತೆಗೆದುಕೊಂಡು ಅದರ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕುವುದರ ಮೂಲಕ ಆ ಜನರಿಗೆ ಅನುಕೂಲವಾಗುದನ್ನು ಮಾಡಬೇಕು. ಇಲ್ಲದಿದ್ದರೆ ನಮಗೆ ಹಿಂಸೆ ಆಗುತ್ತದೆ.

ನನಗೆ ಕೊಟ್ಟಿಲ್ಲ, ನನಗೆ ಕೊಟ್ಟಿಲ್ಲ ಎಂದಾಗ ನಾವು ಅವರಿಗೆ Next ನೀನು ಬಾ ಎಂದು ಹೇಳಬೇಕು. ಫೋನ್‌ನಲ್ಲಿ ರಾತ್ರಿಯೆಲ್ಲಾ ಗಲಾಟೆ. ಇದನ್ನು ಎಲ್ಲಾ ಶಾಸಕರು ಅನುಭವಿಸುತ್ತಿದ್ದೇವೆ. ಆ ದೃಷ್ಟಿಯಲ್ಲಿ ಸರ್ಕಾರದ ಆಲೋಚನೆ ಬದಲಾವಣೆಯಾಗಬೇಕು ಎನ್ನುವಂಥ ಮಾತನ್ನು ಹೇಳುತ್ತೇನೆ. ನಮ್ಮ ಹಳ್ಳಿಗಳಿಗೆ ಇವತ್ತು ಹೆಚ್ಚು ಹಣವನ್ನು ಕೊಡುವುದರ ಮೂಲಕ ಮಲೆನಾಡು ಅಭಿವೃದ್ಧಿ ಮಂಡಳಿಗೆ ಕೇವಲ 35 ಕೋಟಿ ರೂ.ಗಳನ್ನು ಕೊಟ್ಟಿರುತ್ತೀರಿ ಈ ಬಾರಿ 100 ಕೋಟಿ ರೂ.ಗಳನ್ನು ಕೊಡುವುದು ಆಗಬೇಕು. ತಮ್ಮ ಅಧ್ಯಕ್ಷತೆಯಲ್ಲಿ ಎಲ್ಲಾ ಮಲೆನಾಡಿನವರನ್ನು ಸೇರಿಸಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಯ ಸಚಿವರನ್ನು ಕರೆದು ಅದಕ್ಕೆ 100 ಕೋಟಿ ರೂ.ಗಳ ಹಣವನ್ನು ಕೊಡಿಸತಕ್ಕಂಥದ್ದನ್ನು ತಾವು ಮಾಡಬೇಕೆಂದು ಕೇಳಿಕೊಂಡು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಬೇಗ ಬೇಗ ಮುಗಿಸಬೇಕು. ಎಲ್ಲರಿಗೂ 10–10 ನಿಮಿಷ ಮಾತ್ರ.

ಶ್ರೀ ಮಂಕಳ ಸುಬ್ಬ ವೈದ್ಯ (ಭಟ್ಕಳ):– ಮಾನ್ಯ ಅಧ್ಯಕ್ಷರೆ, ನನಗೆ ಒಂದು ಗಂಟೆಯಾದರೂ ಕೊಡಬೇಕು. ಏಕೆಂದರೆ ಪ್ರತಿ ದಿವಸ ತಪ್ಪದೆ ಬಂದು ಕುಳಿತುಕೊಳ್ಳುವವನು ನಾನು.

ಅಧ್ಯಕ್ಷರು:– ನಿಜ, ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಮಂಕಳ ಸುಬ್ಬ ವೈದ್ಯ:– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 14–2–2014 ರಂದು ವಿಧಾನಸಭೆಯಲ್ಲಿ ಮಂಡಿಸಿದ 2014–15ನೇ ಸಾಲಿನ ಆಯವ್ಯಯ ಪತ್ರವನ್ನು ರಾಜ್ಯದ ಜನತೆಯ ಪರವಾಗಿ ನಾನು ಸ್ವಾಗತಿಸುತ್ತಿದ್ದೇನೆ. ಬಡಜನರು, ರೈತರು ಮತ್ತು ಹಿಂದುಳಿದ ವರ್ಗ ಮತ್ತು ಮಧ್ಯಮ ವರ್ಗದವರ ಏಳಿಗೆಗಾಗಿ ಪೂರಕವಾದ ಆಯವ್ಯಯವಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದವನ್ನು ಸಲ್ಲಿಸುತ್ತೇನೆ. ಪ್ಯಾರಾ 7 ರಲ್ಲಿ ಹಸಿದ ಹೊಟ್ಟೆಗೆ ಅನ್ನ ನೆಮ್ಮದಿಯ ಜೀವನಕ್ಕೆ

ಆರೋಗ್ಯ, ವಾಸಕ್ಕೊಂದು ಸೂರು, ಸ್ವಾವಲಂಬಿ ಬದುಕಿಗೆ ಶಿಕ್ಷಣ. ಸ್ವಾವಲಂಬಿ ಶಿಕ್ಷಣದ ಬಗ್ಗೆ ನಾನು ಮಾತನಾಡುವುದಕ್ಕೆ ಬಯಸುತ್ತೇನೆ. ಶಿಕ್ಷಣಕ್ಕೆ ಯಾವ ಕೊರತೆಯೂ ಇಲ್ಲವೆಂದು ಹೇಳಿ ಎಲ್ಲಾ ಸಮಾರಂಭದಲ್ಲಿ ಮತ್ತು ಇಲ್ಲಿ ಚರ್ಚೆ ಮಾಡುವಾಗಲೂ ಹೇಳುತ್ತಾರೆ. ರೈತರ ಬಗ್ಗೆ ಮಾತನಾಡುತ್ತಾರೆ. ಹಿಂದುಳಿದ ವರ್ಗದವರ ಬಗ್ಗೆ ಮಾತನಾಡುತ್ತಾರೆ. ಅಲ್ಪಸಂಖ್ಯಾತರ ಬಗ್ಗೆ ಮಾತನಾಡುತ್ತಾರೆ. ಇದಕ್ಕೆಲ್ಲದಕ್ಕೂ ಕೇಂದ್ರ ಬಿಂದು ಶಿಕ್ಷಣ. ಶಿಕ್ಷಣ ಸರಿಯಾಗದ ಹೊರತು ನಮ್ಮ ರಾಜ್ಯದ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ, ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಎಲ್ಲಾ ಧರ್ಮದವರ ದೇಗುಲ ಎಂದರೆ ವಿದ್ಯಾದೇಗುಲ. ಅಲ್ಲಿ ಯಾವ ಕೊರತೆಯೂ ಇರಬಾರದು. ನಾನು ಈಗಾಗಲೇ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲ ಶಾಲೆಗಳನ್ನೂ ಕೊಟ್ಟಿರುತ್ತೇನೆ. ಯಾವ ಶಾಲೆಯಲ್ಲಿಯೂ ಎಲ್ಲಾ ವ್ಯವಸ್ಥೆ ಇದೆ ಎಂದು ಹೇಳಲಿಲ್ಲ. ಒಂದೇ ಕೊಠಡಿಯಲ್ಲಿ 5ನೇ ತರಗತಿಯವರೆಗೆ ಇವತ್ತು ಕಲಿಸತಕ್ಕಂಥ ಶಾಲೆ ಇದೆ. ಒಂದು ಕ್ಲಾಸ್ ಟೀಚರ್ ಹೋಗಿ ಆ ಸ್ಕೂಲ್ ಒಳಗಡೆ ಹೋಗಿ ಆ ತರಗತಿಯನ್ನು ನಡೆಸುವಾಗ ಇನ್ನುಳಿದ ತರಗತಿಯ ವಿದ್ಯಾರ್ಥಿಗಳು ಮತ್ತು ಶಿಕ್ಷಣ ಹೊರಗಡೆ ಬಂದು ಕುಳಿತುಕೊಳ್ಳುವಂಥ ಒಂದು ವ್ಯವಸ್ಥೆ ಇದೆ. ಇದು ಇರುವಾಗ, ರೈತರಿಗೆ ಅಥವಾ ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ, ದಲಿತರಿಗೆ ಎಲ್ಲಿ ನ್ಯಾಯ ಸಿಗುತ್ತದೆ? ಸರ್ಕಾರದ ಶಾಲೆಯಲ್ಲಿ ಓದುತ್ತಿದ್ದಾರೆಂದರೆ, ಇವತ್ತು ಗ್ಯಾಲರಿಯಲ್ಲಿ ಕುಳಿತಂಥವರ ಮಕ್ಕಳು ಅಲ್ಲ, ಇಲ್ಲಿ ಕುಳಿತಂಥವರ ಮಕ್ಕಳು ಅಲ್ಲ. ಈ ಕಡೆ ಕುಳಿತಂಥವರ ಮಕ್ಕಳು ಅಲ್ಲ. ಅಲ್ಲಿ ಇರುವವರು ನಿಜವಾಗಲೂ ರೈತರ ಮಕ್ಕಳು. ಅಲ್ಲಿ ಇರುವವರು ಹಿಂದುಳಿದ ವರ್ಗದವರ ಮಕ್ಕಳು. ಅಲ್ಲಿರುವವರು ದಲಿತರ ಮಕ್ಕಳು. ಅವರಿಗೆ ಶಿಕ್ಷಣ ಕೊಡಲಿಕ್ಕೆ ನಮ್ಮ ಹತ್ತಿರ ಆಗದೆ ಇದ್ದಾಗ ಏನು ಮಾಡಿ ಏನು ಪ್ರಯೋಜನವಾಗುತ್ತದೆ? ಇಡೀ ನಮ್ಮ ಏರಿಯಾದಲ್ಲಿ 199 ಕಿರಿಯ ಪ್ರಾಥಮಿಕ ಶಾಲೆ ಇದೆ. 197 ಹಿರಿಯ ಪ್ರಾಥಮಿಕ ಶಾಲೆ ಇದೆ. 21 ಪ್ರೌಢ ಶಾಲೆಗಳು ಇವೆ. 4 ಪದವಿ ಪೂರ್ವ ಕಾಲೇಜುಗಳು ಇವೆ. 2 ಡಿಗ್ರಿ ಕಾಲೇಜುಗಳು ಇವೆ. ಡಿಗ್ರಿ ಕಾಲೇಜಿನಲ್ಲಿ 1800 ಮಕ್ಕಳು ಇದ್ದಾರೆ. ಇವತ್ತಿಗೆ

ಕುಳಿತು ಓದಲಿಕ್ಕೆ ಟೇಬಲ್ ಇಲ್ಲ. ಡಿಗ್ರಿ ಕಾಲೇಜು ಓಪನ್ ಆಗಿ 5 ವರ್ಷವಾಯಿತು, ಯಾವ ಮೂಲಭೂತ ಸೌಕರ್ಯಗಳೂ ಇಲ್ಲ.

ಅಧ್ಯಕ್ಷರು:– Head Master ಗೆ ಹೇಳಿ ಒಂದು indent ತಯಾರು ಮಾಡಿ ಕಮಿಷನರ್‌ಗೆ ಕಳುಹಿಸುವುದಕ್ಕೆ ಹೇಳಿ.

ಶ್ರೀ ಮಂಕಳ ಸುಬ್ಬ ವೈದ್ಯ:– ನಾನು ಲೆಟರ್ ಕೊಟ್ಟಿರುತ್ತೇನೆ.

ಅಧ್ಯಕ್ಷರು:– ಯಾರಿಗೆ ಕೊಟ್ಟಿರುತ್ತೀರಿ.

ಶ್ರೀ ಮಂಕಳ ಸುಬ್ಬ ವೈದ್ಯ:– ನಾನು ಮಾನ್ಯ ಶಿಕ್ಷಣ ಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಲೇಟರ್ ಕೊಟ್ಟಿರುತ್ತೇನೆ.

ಅಧ್ಯಕ್ಷರು:– ಅವು ಅಲ್ಲಿಯೇ ಕುಳಿತಿರುತ್ತವೆ. ನಿಮ್ಮ ಹೆಡ್ ಮಾಸ್ಟರ್‌ಗೆ ಇನ್ನೊಂದು ಕೊಡುವುದಕ್ಕೆ ಹೇಳಿ.

ಶ್ರೀ ಮಂಕಳ ಸುಬ್ಬ ವೈದ್ಯ:– ಮಾನ್ಯ ಅಧ್ಯಕ್ಷರೆ, ಇನ್ನೊಂದು ನಾಚಿಕೆ ವಿಷಯವೆಂದರೆ, PUC ಯ Science College ಇವತ್ತು ಭಟ್ಕಳ ತಾಲ್ಲೂಕಿನಲ್ಲಿ ಅಕ್ಷರ ದಾಸೋಹ ಕೊಠಡಿಯಲ್ಲಿ ನಡೆಯುತ್ತಿರುವುದು. ಕಲಿಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಅಲ್ಲಿ ಇರುವವರು ಮೇಲ್ವರ್ಗದವರ ಮಕ್ಕಳು ಅಲ್ಲ. ಅವರು ಹಿಂದುಳಿದ ವರ್ಗದವರ ಮಕ್ಕಳು. ಅಲ್ಲಿ ಬಡವರು ಇರುವವರು. ಅಲ್ಲಿ ಫೀ ಕಡಿಮೆ ಇರುತ್ತದೆ ಒಳ್ಳೆಯ ಶಾಲೆಗೆ ಹೋಗುವುದಕ್ಕೆ ಆಗುವುದಿಲ್ಲವೆನ್ನುವ ಉದ್ದೇಶದಿಂದ ಅಲ್ಲಿ admission ಮಾಡಿಕೊಂಡು ಹೋಗುತ್ತಾರೆ. ನನ್ನ ವಿಧಾನಸಭಾ ಕ್ಷೇತ್ರದಲ್ಲಿರುವ ಎಲ್ಲಾ ಶಾಲೆಗಳನ್ನು ಸರ್ವೆ ಮಾಡಿರುತ್ತೇನೆ. 10 ಕೋಟಿ ರೂ.ಗಳನ್ನು ಕೊಟ್ಟರೆ ಇಡೀ ನನ್ನ ವಿಧಾನಸಭಾ ಕ್ಷೇತ್ರದ 1 ರಿಂದ 10ನೇ ತರಗತಿಯ ಎಲ್ಲಾ ಶಾಲೆಗಳಿಗೆ ಮೂಲಭೂತ ಸೌಕರ್ಯಗಳು ಆಗುತ್ತದೆ. 4 ಕಾಲೇಜಿನಲ್ಲಿ ಒಂದೂ ಕಾಲೇಜು ಸ್ವಂತ ಕಟ್ಟಡದಲ್ಲಿ ಇಲ್ಲ. ಎಲ್ಲಾ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಡಿಗ್ರಿ ಕಾಲೇಜಿನಲ್ಲಿ 56 ಜನ ಶಿಕ್ಷಕರು ಇರಬೇಕು ಅಲ್ಲಿ 8 ಜನ ಶಿಕ್ಷಕರು ಮಾತ್ರ ಇದ್ದಾರೆ. ಮೂರು ತಿಂಗಳ ನಂತರ ಅತಿಥಿ ಶಿಕ್ಷಕರುಗಳನ್ನು ಕೊಟ್ಟಿರುತ್ತಾರೆ. ಆ ಮಕ್ಕಳು

ಓದಿ ಪಾಸಾಗುವುದಕ್ಕೆ ಹೇಗೆ ಸಾಧ್ಯವಿದೆ? ಅವರು ಮುಂದಿನ ದಿವಸಗಳಲ್ಲಿ IAS, IPS, Doctor ಗಳು ಆಗುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಅದಕ್ಕಾಗಿ ನನ್ನ ಉದ್ದೇಶ ಇಷ್ಟೆ, ರೈತರಿಗಾಗಿ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಮತ್ತು ದಲಿತರಿಗಾಗಿ ಏನಾದರೂ ಒಂದು ಕಾರ್ಯಕ್ರಮವನ್ನು ರೂಪಿಸಿ, ಅದು ಶಿಕ್ಷಣಕ್ಕೆಂದು ಮಾಡಿದರೆ ಮಾತ್ರ ಪ್ರಯೋಜನವಾಗುತ್ತದೆ. ಅದು ನೇರವಾಗಿ ಬಡವರಿಗೆ ಮುಟ್ಟುವಂಥ ಒಂದು ಕೆಲಸವಾಗುತ್ತದೆ. ಎಲ್ಲಾ ಶಾಲೆಗಳನ್ನು ಅಭಿವೃದ್ಧಿ ಪಡಿಸಲಿಕ್ಕೆ ಇನ್ನೂ ಹೆಚ್ಚಿನ ಹಣವನ್ನು ಇಡಬೇಕು. RTE act ಎಂದು ಮಾಡಿದರು. ಸರ್ಕಾರ ಒಂದು ಸ್ಕೂಲಿನಲ್ಲಿ LKG ಯಿಂದ ಪ್ರಾರಂಭ ಮಾಡಿರುತ್ತಾರೆ. ಇನ್ನೊಂದು ಸ್ಕೂಲಿನಲ್ಲಿ First standard ದಿಂದ ಪ್ರಾರಂಭ ಮಾಡಿರುತ್ತಾರೆ. ಅದು ಏಕೆ ಎಂದು ಕೇಳಿದರೆ ಸರ್ಕಾರದ ಆದೇಶವಾಗಿದೆ ಎಂದು ಹೇಳುತ್ತಾರೆ. ಒಂದು ಸ್ಕೂಲಿನಲ್ಲಿ 100 ಜನ ಮಕ್ಕಳಿದ್ದರೆ BEO ಅಥವಾ DDPI ಅದನ್ನು ಪರಿಗಣಿಸುವುದಿಲ್ಲ. ಅಲ್ಲಿ ಒಂದು ಕ್ಲಾಸಿಗೆ ಮಾತ್ರ ಅನುಮತಿಯನ್ನು ಕೊಟ್ಟಿರುತ್ತಾರೆ. 40 ಜನ ಮಕ್ಕಳಲ್ಲಿ 10 ಜನರಿಗೆ ಮಾತ್ರ ಅನುಮತಿಯನ್ನು ಕೊಡುತ್ತಾರೆ. ನಮ್ಮ ರಾಜ್ಯದಲ್ಲಿ Private School ನಲ್ಲಿ ಓದುತ್ತಿದ್ದ ಒಂದನೆಯ ಕ್ಲಾಸಿನಲ್ಲಿ ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ದಲಿತರು ಇರಬಹುದು. 25% ಪ್ರಕಾರ ಕೊಡಬೇಕು ಎಲ್ಲಿ ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿ ಎಲ್ಲಿಯೂ ಕೊಡಲಿಲ್ಲ. ಅದನ್ನು ಕ್ರಮಬದ್ಧವಾಗಿ ಮಾಡಬೇಕು. ಅದನ್ನು 50% ಎಂದು ಮಾಡಬೇಕು. ಹೋಗಲಿ 25% ಅಂದರೆ ಒಂದು ಶಾಲೆಯಲ್ಲಿ 100 ಜನ ಮಕ್ಕಳು ಎಂದರೆ 25 ಜನ ಮಕ್ಕಳಿಗೆ ಅವಕಾಶ ಮಾಡಿ ಕೊಡಬೇಕು. ಅಂಥದ್ದು ನಡೆಯುತ್ತಿಲ್ಲ. ದೊಡ್ಡವರ ಪರವಾಗಿ ಇಲಾಖೆ ನಿಂತುಕೊಂಡಿದೆ. ಇನ್ನು ಮೀನುಗಾರರ ಬಗ್ಗೆ ಮಾತನಾಡಬೇಕೆಂದರೆ, ಮೀನುಗಾರರಿಗೆ 300 ಲೀಟರ್ ಕೆರೋಸಿನ್ ಕೊಡುವುದು ಎಂದು ಮಾಡಿದರು. ಅದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ 300 ಲೀಟರ್ ಮೀನುಗಾರರಿಗೆ ಹೋಗುತ್ತಿಲ್ಲ. 300 ಲೀಟರ್ ಕೊಡಬೇಕು. ಅದು ಅಧಿಕಾರಿಗಳ ಬೇಜವಾಬ್ದಾರಿಯಿಂದ 300 ಲೀಟರ್ ಇದ್ದದ್ದು 245 ಲೀಟರಿಗೆ ನಿಂತಿದೆ. ಅಲ್ಲಿ 100 ಬೋಟ್‌ಗೆ ಅನುಮತಿಯನ್ನು ಕೊಟ್ಟಿದ್ದಾರೆ. ಅವರಿಗೆ

ಕೆರೋಸಿನ್ ಕೊಡದೆ ಇದ್ದರೆ ಅವರು ಬೋಟ್ ನಡೆಸುವುದು ಹೇಗೆ? ಸಾವಿರ ಬೋಟ್‌ಗಳಿಗೆ ಇವತ್ತಿಗೂ ಸಬ್ಸಿಡಿಯಲ್ಲಿ ಕೆರೋಸಿನ್ ಕೊಡುತ್ತಿಲ್ಲ. ಅದನ್ನು ಪರಿಶೀಲನೆ ಮಾಡಿ 300 ಲೀಟರ್ ಕೆರೋಸಿನ್ ಕೊಡಬೇಕು. ಹೊನ್ನಾವರ ತಾಲ್ಲೂಕು ಅತೀ ಹಿಂದುಳಿದ ತಾಲ್ಲೂಕು ಎಂದರೆ ತಪ್ಪಾಗಲಿಕ್ಕಿಲ್ಲ. ಸರ್ಕಾರಕ್ಕೆ 100 ಕೋಟಿ ರೂ.ಗಳವರೆಗೆ ಹೊನ್ನಾವರ ತಾಲ್ಲೂಕಿನಿಂದ ಬರುತ್ತದೆ. ಗೇರುಸೊಪ್ಪ ಕರೆಂಟ್ ಉತ್ಪತ್ತಿಯಿಂದ 100 ಕೋಟಿ ರೂ.ಗಳವರೆಗೆ ಬರುತ್ತದೆ. ಅದರ ಜೊತೆಯಲ್ಲಿ ಉಸುಕಿನಿಂದ ಕೋಟಿಗಟ್ಟಲೆ ಹಣ ಬರುತ್ತದೆ. ಆದರೆ ಇವತ್ತಿನವರೆಗೆ ಒಂದೇ ಒಂದು ಮೊರಾರ್ಜಿ ದೇಸಾಯಿ ಶಾಲೆ ಇರುವುದಿಲ್ಲ. ಹಾಸ್ಟೆಲ್‌ಗಳು ಸರಿ ಇರುವುದಿಲ್ಲ. ಒಂದೇ ಒಂದು ಕಿತ್ತೂರು ರಾಣಿ ಚೆನ್ನಮ್ಮ ಶಾಲೆ ಇರುವುದಿಲ್ಲ. ವಿಸ್ತೀರ್ಣದಲ್ಲಿ ನಮ್ಮ ರಾಜ್ಯದಲ್ಲಿಯೇ ದೊಡ್ಡ ತಾಲ್ಲೂಕು ಎಂದರೆ ತಪ್ಪಾಗಲಿಕ್ಕಿಲ್ಲ. ಬಸ್ ಡಿಪೋ ಇಲ್ಲ, ಯಾವುದೇ ಮೂಲಭೂತ ಸೌಕರ್ಯಗಳು ಇಲ್ಲ. ಹೊನ್ನಾವರ ತಾಲ್ಲೂಕಿನಿಂದ 100 ಕೋಟಿ ರೂ.ಗಳವರೆಗೆ ಸರ್ಕಾರಕ್ಕೆ ಆದಾಯ ಹರಿದು ಬರುತ್ತದೆ. 85% ಫಾರೆಸ್ಟ್ ಇದೆ. ಇಂತಹ ತಾಲ್ಲೂಕನ್ನು ಪ್ರಥಮ ಆದ್ಯತೆಯಾಗಿ ತೆಗೆದುಕೊಂಡು ಎಲ್ಲಾ ರೀತಿಯಲ್ಲಿಯೂ ವ್ಯವಸ್ಥೆ ಮಾಡಿ ಕೊಡಲಿಕ್ಕೆ ಪ್ರಯತ್ನವನ್ನು ಮಾಡಿಕೊಡಬೇಕು. ಶರಾವತಿಯ ಎಡದಂಡೆ ಮತ್ತು ಬಲದಂಡೆಯಲ್ಲಿ ಶಾಶ್ವತ ಪರಿಹಾರವನ್ನು ಕಲ್ಪಿಸಿಕೊಡಬೇಕು. ಏಕೆಂದರೆ ಸಾವಿರಗಟ್ಟಲೆ ಜನ ಮನೆ ಕಳೆದುಕೊಂಡಿದ್ದಾರೆ. ಆಕಳು, ಜಾನುವಾರಗಳನ್ನು ಕಳೆದುಕೊಂಡಿದ್ದಾರೆ. ಪ್ರತಿ ಮಳೆಗಾಲದಲ್ಲಿ ಮನೆಯನ್ನು ಬಿಟ್ಟು ಮೇಲುಗಡೆ ಮರದಡಿಯಲ್ಲಿ ಹೋಗಿ ಮಲಗುವಂತಹ ಪರಿಸ್ಥಿತಿ ಇದೆ. ಇಡೀ ರಾಜ್ಯಕ್ಕೆ ಕರೆಂಟ್‌ಅನ್ನು ಕೊಟ್ಟು ಅಲ್ಲಿ ಮನೆ ಬಿಡುವಂತಹ ಪರಿಸ್ಥಿತಿ ಆಗಿದೆ. ಅವರಿಗೆ ಮುಂದಿನ ದಿನದಲ್ಲಿ ಶಾಶ್ವತ ಪರಿಹಾರ ಕಂಡುಕೊಡಬೇಕು. ಅದೇ ರೀತಿಯಲ್ಲಿ ಶರಾವತಿ ನದಿ ಬಂದರಿನಲ್ಲಿ ಹೂಳು ಎತ್ತದೆ ಎಷ್ಟೋ ವರ್ಷಗಳಾಗಿವೆ. ಹೂಳು ಎತ್ತದೆ ಪ್ರತಿ ವರ್ಷ ನೂರಾರು ಬೋಟ್‌ಗಳು ಮುಳುಗಿ ಜನರು ಸಾಯುತ್ತಿದ್ದಾರೆ. ಅಲ್ಲಿ ಹೂಳು ಎತ್ತುವುದಕ್ಕೆ ಪ್ರಥಮ ಆದ್ಯತೆ ಕೊಟ್ಟು ಮೀನುಗಾರರನ್ನು ರಕ್ಷಣೆ ಮಾಡಬೇಕು. ಅದೇ ರೀತಿಯಲ್ಲಿ ಪ್ರವಾಸೋದ್ಯಮ ಇಲಾಖೆಯವರು ನಿತ್ರಾಣಿಯನ್ನು

ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಬೇಕೆಂದು ಇದ್ದಾರೆ. ಇಡೀ ರಾಜ್ಯದಲ್ಲಿಯೇ ಒಂದು ಸಮುದ್ರದಲ್ಲಿ ಅತಿ ದೊಡ್ಡ ನಡುಗಡ್ಡೆ ಇರುವುದು ಎಂದರೆ ಅದು ನಿತ್ರಾಣಿ. ಅದನ್ನು ಉಳಿಸುವಂಥಹ ಕೆಲಸ ಮಾಡಬೇಕು. ಈಗಾಗಲೇ ಮಿಲಟರಿಯವರು ಬಂದು ಅಲ್ಲಿ ಬಾಂಬ್‌ಅನ್ನು ಹಾಕಿ ಅಲ್ಲಿನ ವಾತಾವರಣವನ್ನೇ ಹಾಳು ಮಾಡುತ್ತಿದ್ದಾರೆ. ಮೀನುಗಳು ಸಾಯುತ್ತಿವೆ. ಅದನ್ನು ನಿಲ್ಲಿಸಬೇಕು. ಅಲ್ಲಿ ಪ್ರಾಣಿಗಳಿವೆ, ದೇವಸ್ಥಾನವಿದೆ, ಮರಗಿಡಗಳು ಇವೆ. ಅದನ್ನು ಪ್ರವಾಸೋದ್ಯಮದ ಅಡಿಯಲ್ಲಿ ಅಭಿವೃದ್ಧಿ ಮಾಡಿ ಪ್ರವಾಸಿಗರಿಗೆ ಅಲ್ಲಿ ಉಳಿಯಲಿಕ್ಕೆ ಅಥವಾ ಹೋಗಿ ಬರುವಂತಹ ವ್ಯವಸ್ಥೆ ಮಾಡಬೇಕು. ಮುರುಡೇಶ್ವರದಿಂದ ನೇರವಾಗಿ ಇರುವಂಥದ್ದು ನಿತ್ರಾಣಿ ಗುಡ್ಡೆ. ಆ ನಿತ್ರಾಣಿ ಗುಡ್ಡೆಯನ್ನು ಅಭಿವೃದ್ಧಿ ಮಾಡಲಿಕ್ಕೆ ಈಗಾಗಲೇ ಪ್ರವಾಸೋದ್ಯಮ ಇಲಾಖೆ ಹಾಗೂ ಮಾನ್ಯ ಮುಖ್ಯಮಂತ್ರಿಯವರು ನಿತ್ರಾಣಿ ಉತ್ಸವ ಮಾಡಬೇಕೆಂದು ಬಜೆಟ್‌ನಲ್ಲಿ ತೆಗೆದುಕೊಂಡಿದ್ದಾರೆ. ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ಇಡೀ ರಾಜ್ಯದಲ್ಲಿ ಇರುವಂಥದ್ದು ಅದೊಂದೇ ಗುಡ್ಡೆ. ಅಷ್ಟು ದೊಡ್ಡದಾಗಿ, ನಡುಗಡ್ಡೆಯಲ್ಲಿ ಒಂದು ದ್ವೀಪ. ಅದನ್ನು ಕರ್ನಾಟಕ ಸರ್ಕಾರದ ವಶಕ್ಕೆ ತೆಗೆದುಕೊಂಡು ಮುಂದಿನ ದಿನಗಳಲ್ಲಿ ಅಭಿವೃದ್ಧಿ ಮಾಡುವಂತಹ ಕೆಲಸ ಮಾಡಬೇಕು. ಪ್ರಥವ ಬಾರಿಗೆ ನನಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ):– ಮಾನ್ಯ ಅಧ್ಯಕ್ಷರೆ, ತಾವು ಬಜೆಟ್ ಭಾಷಣದ ಮೇಲೆ ನನಗೆ ಮಾತನಾಡುವುದಕ್ಕೆ ಕಡೆಯದಾಗಿ ಅವಕಾಶವನ್ನು ಕೊಟ್ಟಿದ್ದೀರಿ. ಅದಕ್ಕೆ ವಿಶೇಷವಾಗಿ ಧನ್ಯವಾದಗಳನ್ನು ಹೇಳುತ್ತಾ, ನನಗೆ ಈ ಬಜೆಟ್ ಮಂಡನೆಯಾಗುತ್ತದೆ ಎಂದು ಹೇಳಿದಾಗ ಬಹಳ ಸಂತೋಷ ಹಾಗೂ ಖುಷಿ ಇತ್ತು. ಮಾನ್ಯ ಸಿದ್ದರಾಮಯ್ಯನವರು 9 ವರ್ಷಗಳ ಸುದೀರ್ಘ ಬಜೆಟ್ ಇಟ್ಟಂತಹ ಅನುಭವವನ್ನು ಹೊಂದಿರುವಂತಹ ಮಾನ್ಯ ಮುಖ್ಯಮಂತ್ರಿಗಳು ಜೊತೆಗೆ ಹಣಕಾಸಿನ ಸಚಿವರು. ಹಾಗಾಗಿ ಹೆಚ್ಚು ಹಣವನ್ನು ಕೊಡುತ್ತಾರೆ, ರೈತರ ಪರವಾಗಿ

ಇರುತ್ತದೆ, ಜನಪರವಾಗಿ ಇರುತ್ತದೆ ಎಂದು ಆಲೋಚನೆ ಮಾಡಿದ್ದೆ. ನಾನು ಅಂದುಕೊಂಡಿದ್ದ ರೀತಿಯೂ ಇದೆ. ನಾನೇನೂ ಪೂರ್ತಿ ಕೆಟ್ಟುಹೋಗಿದೆ ಎಂದು ಹೇಳಲಿಕ್ಕೆ ಇಚ್ಛೆಪಡುವುದಿಲ್ಲ. ಹಾಲಿಗೆ ಎರಡು ರೂಪಾಯಿ ಇದ್ದುದ್ದನ್ನು ನಾಲ್ಕು ರೂಪಾಯಿ ಮಾಡಿದ್ದೀರಿ. ಇದು ಒಳ್ಳೆಯ ಕಾರ್ಯಕ್ರಮ. ಆದರೆ ಕೆಟ್ಟುಹೋಗಿದೆ ಎನ್ನುವ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಅವರು ಎಲ್ಲೋ ಒಂದು ಕಡೆ ಚಿಕ್ಕಮಗಳೂರು ಜಿಲ್ಲೆಯನ್ನು ಪೂರ್ತಿ ಕೆಟ್ಟ ದೃಷ್ಟಿಯಲ್ಲಿ ನೋಡಿಬಿಟ್ಟರೇನೋ ಎಂದು ನಮಗೆ ಅನಿಸಿದೆ. ನನಗೆ ಏಕೆ ಆ ರೀತಿ ಅನಿಸಿತು ಎಂದರೆ, ಮಾನ್ಯ ಕಾನೂನು ಸಚಿವರು ತಲೆ ಅಲ್ಲಾಡಿಸುತ್ತಿದ್ದಾರೆ. ನನ್ನ ನೋವು ಏನೆಂದರೆ, ಇಡೀ ಚಿಕ್ಕಮಗಳೂರು ಜಿಲ್ಲೆಯನ್ನು ಬಜೆಟ್ ಪುಸ್ತಕದಲ್ಲಿ ಗುರ್ತಿಸಿದ್ದು, ಚಿಕ್ಕಮಗಳೂರು ಅಂದರೆ, ಶೃಂಗೇರಿಯ ನಕ್ಸಲ್‌ಪೀಡಿತ ಪ್ರದೇಶದ ನಾರು ಉತ್ಪಾದನಾ ಕೇಂದ್ರಕ್ಕೆ ಹಣ ಎಂದು ಅದನ್ನು ಗುರುತಿಸಿರುವುದು ಇದೆಯಲ್ಲಾ ಇದನ್ನು ನಾನು ವಿರೋಧ ಮಾಡುತ್ತೇನೆ ಮತ್ತು ಮಲೆನಾಡನ್ನು ಬರೀ ನಕ್ಸಲ್ ಎಂದು ಆಲೋಚನೆಯಲ್ಲಿ ಚಿಕ್ಕಮಗಳೂರನ್ನು ನೋಡಿದ್ದನ್ನು ನನ್ನ ನೋವನ್ನು ಇಲ್ಲಿ ವ್ಯಕ್ತಪಡಿಸುತ್ತೇನೆ. ಒಂದು ತೆಂಗು ನಾರು ಘಟಕವನ್ನು ಬಜೆಟ್ ಪುಸ್ತಕದಲ್ಲಿ ಹೇಳುವುದು ಬೇಕಾಗಿರಲಿಲ್ಲ. ಇದು 10 ವರ್ಷಗಳಿಂದ ನಡೆಯುತ್ತಿದೆ ಮತ್ತು 10 ವರ್ಷಗಳಿಂದ ನಡೆಯುತ್ತಿರುವುದು ಮಾತ್ರವಲ್ಲ ಅದನ್ನು ಪುನಶ್ಚೇತನ ಎಂದು ಹೇಳಿ ಅದಕ್ಕೊಂದು ನಕ್ಸಲ್ ಹೆಸರನ್ನು ಬಜೆಟ್ ಪುಸ್ತಕದಲ್ಲಿ ಪ್ರಿಂಟ್ ಮಾಡುವಂತಹ ಯಾವ ದೊಡ್ಡ ವಿಷಯ ಇತ್ತು ಎನ್ನುವ ನೋವಿದೆ. 2 ರೂಪಾಯಿಯಿಂದ 4 ರೂಪಾಯಿಗೆ ತೆಗೆದುಕೊಂಡು ಹೋಗಿರುವಂತಹ ಸಂತೋಷದ ಮಧ್ಯದಲ್ಲಿ ಈ ನೋವನ್ನೂ ವ್ಯಕ್ತಪಡಿಸುತ್ತಾ, ಒಟ್ಟಾರೆಯಾಗಿ ಈ ಬಜೆಟ್ ಚಿಕ್ಕಮಗಳೂರು ಜಿಲ್ಲೆಗೆ ಬೇವು-ಬೆಲ್ಲವೂ ಅಲ್ಲ. ಬರೀ ಬೇವು. ನಾಡಿದ್ದು ಬರುತ್ತಿರುವ ನಮ್ಮ ಯುಗಾದಿ ಹಬ್ಬದ ಎದುರುಗಡೆ ನಮಗೆ ಸಿಕ್ಕಿರುವಂತಹ ಒಂದು ಬೇವು ಅದು. ಅದರಲ್ಲಿ ಒಂದು ಸಣ್ಣ ಕಾಳು ಬೆಲ್ಲವೂ ಎಲ್ಲೆಲ್ಲೂ ಇಲ್ಲ. ಮೊದಲನೇ ಬೇವನ್ನು ನಾನು ಹೇಳಿದ್ದೇನೆ. ಜೊತೆಗೆ ಇವತ್ತು

ಚಿಕ್ಕಮಗಳೂರು ಜಿಲ್ಲೆಗೆ ಕಳೆದ ಬಾರಿ ಬಜೆಟ್ ಇಟ್ಟಾಗ ನಾನು, ರವಿ ಲಿಂಗಯ್ಯನವರು.....

ಶ್ರೀ ಸಿ.ಟಿ. ರವಿ:– ಮಾನ್ಯ ಜೀವರಾಜರವರೆ, ಈ ಬೆಲ್ಲವೆಲ್ಲಾ ನಮ್ಮ ಶ್ರೀನಿವಾಸ ಪ್ರಸಾದ್‌ರವರು, ಕಾನೂನು ಸಚಿವರೇ ತೆಗೆದುಕೊಂಡು ಹೋಗಿದ್ದಾರೆ. ಹಾಗಾಗಿ ನಮಗೆ ಬೇವು ಉಳಿದಿದ್ದು.

ಶ್ರೀ ಡಿ.ಎನ್. ಜೀವರಾಜ್:– ಹೋಗಲಿ ಬಹಳ ಹಿರಿಯರು ನಮ್ಮವರಿಗೆ ತೆಗೆದುಕೊಂಡಿದ್ದಾರಲ್ಲಾ, ಆದರೆ ಚೀಲಕ್ಕೆ ಹತ್ತಿದ್ದಾದರೂ ಚೂರು ಚೂರು ಬೆಲ್ಲವನ್ನು ನಮಗೆ ಕೊಡಬಹುದಾಗಿತ್ತಲ್ಲಾ ಎನ್ನುವುದು ನನ್ನ ಆಸೆ.

ಶ್ರೀ ತನ್ವೀರ್ ಸೇಠ್:– ಸಿಹಿ ತಿಂದಿದ್ದು ಆಗಿತ್ತಲ್ಲಾ ಅದಕ್ಕೆ ಬೇವು ಕೊಟ್ಟಿರುವುದು.

ಶ್ರೀ ಡಿ.ಎನ್. ಜೀವರಾಜ್:– ನಿಮಗೂ ಕಷ್ಟವಾಗಿದೆ ಎಂದು ನನಗೆ ಒಂದು ಚೂರು ಗೊತ್ತಾಗಿದೆ. ಮಾನ್ಯ ಅಧ್ಯಕ್ಷರು ಐದು ನಿಮಿಷದಲ್ಲಿ ಮಾತನಾಡಿ ಮುಗಿಸಿ ಎಂದು ಹೇಳಿದ್ದಾರೆ. Time waste ಮಾಡಬೇಡ. ಮಾನ್ಯ ಅಧ್ಯಕ್ಷರೆ ನೀವು ಹೇಳಿದ್ದನ್ನು ನಾನು ಅವರಿಗೆ ಹೇಳಿದೆ. ತಾವೇ ಅಧ್ಯಕ್ಷರು ಇದ್ದಾಗ ನಾವೆಲ್ಲಾ well ಗೆ ಬಂದಿದ್ದೆವು. ಈ ವರ್ಷ ಆಗಲಿಲ್ಲ ಬಿಡಪ್ಪಾ ಮುಂದಿನ ವರ್ಷ ಚಿಕ್ಕಮಗಳೂರು ಜಿಲ್ಲೆಗೆ ಡೈರಿ ಕೊಡುತ್ತಾರೆ ಎಂದು ತಾವೂ ನಮಗೆ ಸಲಹೆಗಳನ್ನು ಕೊಟ್ಟಿದ್ದೀರಿ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ವರ್ಷವಾದರೂ KMF ನ ಒಂದು full-fledged dairy ಕೊಡುತ್ತಾರೆ ಎಂದು ಅಂದುಕೊಂಡೆವು. ಅಖಂಡ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟ ಚಾಮರಾಜನಗರಕ್ಕೆ ಒಂದು ಡೈರಿ ಸಿಗುತ್ತದೆ, ಮಾನ್ಯ ಕಾನೂನು ಸಚಿವರೆ. ಹೋದ ವರ್ಷವೇ ಸಿಗುತ್ತದೆ. ಅಲ್ಲಿ ಸಿಕ್ಕಿದ್ದು ತಪ್ಪು ಎಂದು ನಾನು ಹೇಳುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಅದೇನೋ ಒಂದು ಪ್ರೀತಿ, ಪಕ್ಕದ್ದು ಕೊಟ್ಟಿರಲಿ. ಅಲ್ಲಿ ಶ್ರೀನಿವಾಸ ಪ್ರಸಾದ್‌ರವಂತಹ ಹಿರಿಯರು ಇದ್ದಾರೆ ಎಂದೂ ಕೊಟ್ಟಿರಬಹುದು ಇರಲಿ ಕೊಟ್ಟಿದ್ದರೆ ಅದಕ್ಕೆ ನನ್ನ ವಿರೋಧವಿಲ್ಲ. ಆದರೆ ನಮಗೆ ಕೊಡಲಿಲ್ಲ ಎನ್ನುವ ನೋವಿದೆ. ನಮಗೆ ಹಾಲಿಗೆ

2 ರೂಪಾಯಿಯಿಂದ 4 ರೂಪಾಯಿಗೆ ಹೋಯಿತಲ್ಲಾ ನಮ್ಮೂರ ತಾಯಿ, ನಮ್ಮೂರ ಅಕ್ಕ, ಇವತ್ತು ಅಲ್ಲಿ ಹಾಲು ಹಾಕಿ ಬಂದ ಯಜಮಾನ ಆ ತಾಯಿಗೆ 4 ರೂಪಾಯಿ ಸಿಕ್ಕಿದರೆ, 10 ಲೀಟರ್ ಹಾಲು ಹಾಕಿದರೆ 40 ರೂಪಾಯಿ ದಿನಕ್ಕೆ ಸಿಕ್ಕಿದರೆ ತಿಂಗಳಿಗೆ 1,200 ರೂಪಾಯಿ ನಮ್ಮೂರು ಚಿಕ್ಕಮಗಳೂರು ಅಮ್ಮನಿಗೂ ಸಿಕ್ಕುತ್ತಿತ್ತಲ್ಲಾ, ನಾವು ಈಗ ಹೇಗೆ ಆಗಿದ್ದೇವೆ ಗೊತ್ತಾ, ಮಾನ್ಯ ರೇವಣ್ಣನವರು ಇಲ್ಲೇ ಇದ್ದಾರೆ, ಹಾಸನ ಡೈರಿಯಿಂದ ಚಿಕ್ಕಮಗಳೂರನ್ನು ಬೇರ್ಪಡಿಸಿ ಎಂದು ಒಪ್ಪಿಗೆ ಕೊಟ್ಟಿದ್ದಾರೆ. ಅವರದ್ದೇನೂ objection ಇಲ್ಲ. ಅವರು clearance ಕೊಟ್ಟಿದ್ದಾರೆ. ಚಿಕ್ಕಮಗಳೂರಿನ ಒಂದು part ಹಾಸನಕ್ಕೆ, ಎನ್.ಆರ್.ಪುರದ 12 ಕೇಂದ್ರಗಳನ್ನು ಶಿವಮೊಗ್ಗಕ್ಕೆ, ಆ ಶಿವಮೊಗ್ಗದವರು ನಾವು ಕಳಚಿಕೊಂಡರೆ ಸಾಕು ಎಂದು ಹೇಳುತ್ತಾರೆ. ಅದಕ್ಕೆ ಅವರು ಏನು ಮಾಡಿದರು ಎಂದರೆ, ನಾವು ಮಂತ್ರಿ ಇದ್ದಾಗ ಜಬರದಸ್ತು ಮಾಡಿ 12 point ಮಾಡಿಸಿ ಸಂಘ ಮಾಡಿಸಿದೆವು. ಈಗ ಕಳಚಿಕೊಂಡರೆ ಸಾಕು ಎಂದು ಹೇಳಿ ಒಂದು ದಿನ ಹಾಲು ಹಾಳಾಗಿದೆ ಎಂದು ಹೇಳುವುದು, ಒಂದು ದಿನ ಅದರ density ಇಲ್ಲವೆಂದು ಹೇಳುವುದು, ಮೀಟರ್ ಕೆಟ್ಟಿದೆ ಎಂದು ಹೇಳುವುದು. ಒಟ್ಟಾರೆಯಾಗಿ ರೈತರ ಆರೋಗ್ಯ ಇಲ್ಲಿ ಕೆಟ್ಟಿದೆ. ನಾವು ಒಂದು part ಶಿವಮೊಗ್ಗಕ್ಕೆ, ಒಂದು part ಹಾಸನಕ್ಕೆ. ಇನ್ನು ಉಳಿದಿದು ಇದೆಯಲ್ಲಾ, ಶೃಂಗೇರಿ, ಕೊಪ್ಪ, ಎನ್.ಆರ್.ಪುರ, ಮೂಡಿಗೆರೆ, ನಿಜವಾದ ನಕ್ಸಲ್‌ರ ಕಳಕಳಿ ನಿಮಗೆ ಇದ್ದಿದ್ದರೆ ಅಧ್ಯಕ್ಷರೆ ತಮ್ಮ ಮುಖಾಂತರ ನಾನು, Home Minister ನವರೂ ಇದ್ದಾರೆ, ಅವರಿಗೂ ಹೇಳುತ್ತೇನೆ. ನಿಮಗೆ ನಿಜವಾದ ದುಡಿಯುವ ಕೈಗೆ ಕೆಲಸ ಕೊಡಬೇಕೆನ್ನುವ ಕಳಕಳಿ ಇದ್ದಿದ್ದರೆ ನಕ್ಸಲ್ ಅನ್ನು ತೆಗೆಯಲೇ ಬೇಕು ಎಂದು ಇದ್ದಿದ್ದರೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಶೃಂಗೇರಿ, ಕೊಪ್ಪ, ಎನ್.ಆರ್.ಪುರ, ಚಿಕ್ಕಮಗಳೂರು ಒಂದು part ಇಲ್ಲಿ ನಕ್ಸಲ್ ಎಂದು ಏನು ಗುರುತು ಹಚ್ಚಿದ್ದಾರೆ, ಆ ಜಾಗದಲ್ಲಿ ನೀವು ಪೂರ್ಣ ಪ್ರಮಾಣದಲ್ಲಿ ರೈತರಿಗೆ ದರ ಕಟ್ಟಿಯಾದರೂ ನೀವು ಹಾಲನ್ನು ಡೈರಿಗೆ ಹಾಕುವಂಥದ್ದನ್ನು ಮಾಡಿ ಎಂದು ಹೇಳಿ ಚಿಕ್ಕಮಗಳೂರಿಗೆ ಒಂದು ಡೈರಿಯನ್ನು ಕೊಡುತ್ತಿದ್ದೀರಿ. ನಾನು ಇವತ್ತು ಇದನ್ನೆಲ್ಲಾ ಆರೋಪಕ್ಕಾಗಿ ಹೇಳುತ್ತಿಲ್ಲ. ನಮ್ಮ ಮಾನ್ಯ

ಮುಖ್ಯಮಂತ್ರಿಗಳು ಹಾಗೂ ಇಲ್ಲಿರುವಂತಹ ಎಲ್ಲಾ ಹಿರಿಯ ಮಂತ್ರಿಗಳು reply ನಲ್ಲಿ ನಾಳೆ ಕೊಡಿಸುತ್ತಾರೆ ಎಂದು ನಿಮ್ಮ ಮುಖಾಂತರ ಕೇಳುತ್ತಿದ್ದೇನೆ. ನಾಳೆ ಅವರು ಘೋಷಣೆ ಮಾಡಬೇಕು ಎನ್ನುವ ಕಾರಣಕ್ಕಾಗಿ ಕೇಳುತ್ತಿದ್ದೇನೆ ಅಷ್ಟೆ ಅದನ್ನು ಬಿಟ್ಟರೆ ಇದನ್ನು ಆರೋಪಕ್ಕಾಗಿ, ನನ್ನ ಅಭ್ಯಾಸಕ್ಕಾಗಿ ಹೇಳುತ್ತಿಲ್ಲ. ಮೊನ್ನೆ ನಾನು ಸಿಗಂಧೂರು ದೇವಸ್ಥಾನಕ್ಕೆ ಹೋಗಿದ್ದೆ. ಮಾನ್ಯ ಅಧ್ಯಕ್ಷರೆ, ಅದು ತಮ್ಮ constituency ಗೆ ಬರುತ್ತದೆ. ನಾನು ಅಲ್ಲಿ ಸಿಗಂಧೂರು ರಾಮಪ್ಪನವರನ್ನು ಕೇಳಿದೆ, ಇದು ಯಾರಿಗೆ ಬರುತ್ತದೆ? ರತ್ನಾಕರ್‌ರವರಿಗೆ ಬರುತ್ತದೆಯೇ ಅಥವಾ ನಮ್ಮ ಯಜಮಾನರಿಗೆ ಬರುತ್ತದೆಯೇ ಎಂದು ಕೇಳಿದೆ. ಯಜಮಾನರದ್ದು ಎಂದು ಹೇಳಿದರು. ಆಗ ಮಾತ್ರ ನನಗೆ ಬಹಳ ನೋವಾಯಿತು. ನೋಡಿ ನಿಮ್ಮದು, ನಮ್ಮದು ಕಿಮ್ಮನೆ ರತ್ನಾಕರ್‌ರವರದ್ದು ಉದಾಹರಣೆಗೆ ಹೇಳಿದೆ. ಈಗ ಅಭಯಚಂದ್ರಜೈನ್‌ನವರು ಹತ್ತಿರ ಹತ್ತಿರ ಬರುತ್ತಾರೆ. ಒಂದು ಬಜೆಟ್ ನೀಡಬೇಕಾದರೆ ಅದು ವೈಜ್ಞಾನಿಕವಾಗಿರಬೇಕು. ಬೆಂಗಳೂರಿನದ್ದು 5 ಕಿ.ಮೀ. radius ಇರುವಂತಹ ಯಾವುದೋ ಗ್ರಾಮೀಣ ಪ್ರದೇಶ ಸ್ವಲ್ಪ ಸೇರಿಕೊಂಡಿದೆ ಎಂದರೆ, ಅವರಿಗೂ 'ನಮ್ಮ ಗ್ರಾಮ ನಮ್ಮ ರಸ್ತೆ' ಯಲ್ಲಿ 20 ಕಿ.ಮೀ. ರಸ್ತೆ. ಕಾಗೋಡು ತಿಮ್ಮಪ್ಪರವರ ಸಾಗರ ಕ್ಷೇತ್ರ 1,500 ಕಿ.ಮೀ. ರಸ್ತೆ ಬರುತ್ತದೆ. ನಮ್ಮ ಕಿಮ್ಮನೆ ರತ್ನಾಕರ್‌ರವರದ್ದು ಗ್ರಾಮೀಣ 1,200 ಕಿ.ಮೀ. ರಸ್ತೆ ಬರುತ್ತದೆ. ನನ್ನ ಶೃಂಗೇರಿ ವಿಧಾನಸಭಾ ಕ್ಷೇತ್ರ ದೇಶದಲ್ಲಿ ಏಕೈಕ ಕ್ಷೇತ್ರ. ಮೂರು ಪೂರ್ಣ ತಾಲ್ಲೂಕುಗಳನ್ನು ಮತ್ತು ಚಿಕ್ಕಮಗಳೂರಿನ ಒಂದು ಹೋಬಳಿ ಹೊಂದಿರುವಂತಹ ಏನಾದರೂ ಒಂದು ಕ್ಷೇತ್ರ ಇದ್ದರೆ ದೇಶದಲ್ಲಿ ಏಕೈಕ ಕ್ಷೇತ್ರ. ಆ ಕ್ಷೇತ್ರಗಳಿಗೆ ನಿಮಗೂ, ನಮಗೂ, ರತ್ನಾಕರ್‌ರವರಿಗೂ, ಅಭಯಚಂದ್ರಜೈನ್‌ರವರಿಗೂ ಎಲ್ಲರಿಗೂ, ಶ್ರೀನಿವಾಸ ಪ್ರಸಾದ್‌ರವರದ್ದೂ ಅದೇ ರೀತಿ ಬರುತ್ತದೆ ಆದರೆ ನಮ್ಮಷ್ಟು ಅಲ್ಲ. 20.ಕಿ.ಮೀ. ಕೊಟ್ಟರೆ, ಮತ್ತೆ ಅದರಲ್ಲೊಂದು ಮಾನದಂಡ. ನೀವು ಒಂದು ಕಿ.ಮೀ.ನ್ನೆಲ್ಲಾ ಕೊಡಬೇಡ. Constructive ಆಗಿ ಇರಬೇಕು. ಸ್ವಲ್ಪ ಹೆಚ್ಚೆಚ್ಚು ಕೊಡಿ ಎಂದು. 4 ಕಿ.ಮೀ. ಕೊಟ್ಟರೆ 4 ಊರಿಗೂ ಕೊಡುವುದಿಲ್ಲ. ನಾವು ಒಂದು ಊರಿಗೇ ಹೋಗುವ ಹಾಗೆ ಇಲ್ಲ. ತಮಗೂ ಕೇಳುತ್ತಾರೆ, ಮಾನ್ಯ ಅಧ್ಯಕ್ಷರೆ, ನೀವು Speaker

ಆಗಿದ್ದೀರಲ್ಲಾ, ಏನು ಮಾಡಿದ್ದೀರಿ? ನಾನು ಚಾಡಿ ಹೇಳುತ್ತೇನೆ ಎಂದು ಹೇಳಬಹುದು ಅದನ್ನು ಬಿಟ್ಟರೆ ಏನು ಹೇಳುವುದು ಇದೆ? ಬಜೆಟ್ ವೈಜ್ಞಾನಿಕವಾಗಿರಬೇಕು. ಬಜೆಟ್‌ಅನ್ನು ಮಂಡನೆ ಮಾಡಬೇಕಾದರೆ, ಒಬ್ಬರು ಬಜೆಟ್ ಇಡಬೇಕಾಗಿರುವ ಸಂದರ್ಭದಲ್ಲಿ, ಇವೆಲ್ಲವನ್ನೂ ಮುಖ್ಯಮಂತ್ರಿಗಳೇ ಮಾಡಬೇಕು, ಹಣಕಾಸಿನ ಸಚಿವರೇ ಮಾಡಬೇಕೆಂದು ಇಲ್ಲ. ಅಧಿಕಾರಿಗಳೂ ಕೂಡ ಅದನ್ನು ಹೇಳುತ್ತಿರುವ ಸಂದರ್ಭದಲ್ಲಿ ನೋಡಿ ಕಿ.ಮೀ. ಮೇಲೆ ಕೊಡಬೇಕಾಗುತ್ತದೆ. ಇದು ವೈಜ್ಞಾನಿಕವಾಗಿ ಆಗುತ್ತದೆ. ಹಂಚಿಕೆಗಳು ಸರಿಯಾಗಿ ಆಗಬೇಕು ಎನ್ನುವುದು ಆಗುತ್ತದೆ. ಮಲೆನಾಡಿಗೆ ಒಂದು ರಾಜ್ಯ ಬೇಕು ಎಂದು ನಾವು ಕೇಳಬೇಕಾಗುತ್ತಿತ್ತು ಎಂದು ತಮಾಷೆಯಾಗಿ ಮಾನ್ಯ ರವಿಯವರು ಹೇಳಿರಬಹುದು. ಇದನ್ನು ಕೇಳುವ ಒಂದು ದಿನ ಬರಬಹುದು. ಏಕೆಂದರೆ ಬಯಲು ಸೀಮೆ ಒಂದು ಊರಿಗೆ ಹೋದರೆ, minimum 500 ರಿಂದ 1,000 ಜನರು ಸಿಗುತ್ತಾರೆ. ನಾನು, ನೀವು 50 ಜನ ಹುಡುಕಬೇಕೆಂದರೆ ನಾವು 10 ಊರಿಗೆ ಹೋಗಿ ಬರಬೇಕು. ಮಾನ್ಯ ಸಚಿವರಾದ ಶ್ರೀ ಜಯಚಂದ್ರರವರನ್ನು ಕರೆದುಕೊಂಡು ಹೋಗಿ ತೋರಿಸಿ practical ಆಗಿ ಹೇಗೆ ಇದೆ ಎಂದು ಅವರಿಗೆ ಗೊತ್ತಿದೆ. ಕುವೆಂಪುರವರು ಒಂದು ಕವನದಲ್ಲಿ ಹೇಳುತ್ತಾರೆ "ನಮ್ಮ ಊರಿನಲ್ಲಿ ಒಂದು ಮನೆಗೆ ಒಂದೂರು ಎಂದು ಹೆಸರು" ಒಂದು ಊರಿಗೆ ಒಂದು ಹೆಸರು, ಮನೆಗೆ ಒಂದೂರು ಎಂದು ಹೆಸರು ಇದೆ. ನಿಮ್ಮ ಊರಿನಲ್ಲಿ ಹಾಗಿಲ್ಲ. 500 ಮನೆ ಇದ್ದರೆ ಅದಕ್ಕೊಂದು ಊರು ಎಂದು ಹೆಸರು ಅಲ್ಲಿಗೆ ಅದು ಸಣ್ಣದು. ಮಾನ್ಯ ಕಾರಜೋಳರವರು ಅದು ಸಣ್ಣದು ಎಂದು ಹೇಳುತ್ತಾರೆ. ನಮ್ಮದು ಹೇಗೆ ಇದೆ ಎಂದರೆ ಸಾರ್ವಜನಿಕ ಸಭೆ ಎಂದರೆ ನೀವು ಅಲ್ಲಿಗೆ ಬಂದಾಗ ನೂರು ಜನರು ಬರುತ್ತಾರೆ. ಅಲ್ಲಿಗೆ ಕಾರಿನಲ್ಲಿ ಬಂದಾಗ ಇವತ್ತು ಒಳ್ಳೆಯ ಜನರು ಬಂದಿದ್ದಾರೆ ಎಂದು ನಾವು ಮಾತನಾಡಿಕೊಳ್ಳುವುದು. ಇಲ್ಲಿ ನೂರು ಜನರು ಬಂದಿದ್ದಾರೆಂದರೆ ಡೆಪಾಸಿಟ್ ಗ್ಯಾರಂಟಿ ಹೋಗುತ್ತದೆ. ಮಾನ್ಯ ಅಶೋಕ್‌ರವರು Home Minister ಆಗಿದ್ದಾಗ ನನ್ನ constituency ಯ ಕಾರ್ಯಕ್ರಮಕ್ಕೆ ಬಂದಿದ್ದರು. ಆ ಕಾರ್ಯಕ್ರಮದಲ್ಲಿ ಸುಮಾರು 150 ಜನರು ಇದ್ದರು. ಇವರು ನೀನು ಗ್ಯಾರಂಟಿ ಸೋಲುತ್ತೀಯಾ

ಎಂದು ಹೇಳಿದ್ದರು. ಆಗ ನಾನು ಅವರಿಗೆ ಹೇಳಿದೆ ಏ ಅಣ್ಣಾ, ಹೋದ ವರ್ಷ ನಾನು ಚುನಾವಣೆಯಲ್ಲಿ ಸುಮಾರು 18,000 ಮತಗಳ ಲೀಡಿಂಗ್‌ನಲ್ಲಿ ಗೆದ್ದಿದ್ದೇನೆ. ಆಗ ಸುಮಾರು 75 ಜನರು ಇದ್ದರು ಈಗ ಸುಮಾರು 150 ಜನರು ಇದ್ದಾರೆ ದಯವಿಟ್ಟು ನೀನು ಈ ರೀತಿಯಾಗಿ ಮಾತನಾಡಬೇಡ ಎಂದು ಹೇಳಿದೆ. ಹೌದಾ? ಹಾಗಾದರೆ ನಾನು ಭಾಷಣ ಮಾಡುತ್ತೇನೆಂದು ಹೇಳಿದರು. ಆನಂತರ ನಾನು ಚುನಾವಣೆಯಲ್ಲಿ ಗೆದ್ದು ಬಂದ ಮೇಲೆ ಅವರನ್ನು ಕೇಳಿದೆ ನಿನ್ನನ್ನು ಕರೆದುಕೊಂಡು ಹೋಗಿ ನಾನು ಹಾಳಾಗಿ ಹೋಗಿ ಬಿಡುತ್ತಿದ್ದೆನಲ್ಲಾ ಎಂದು ಹೇಳಿದೆ. ಇವರ ಊರಿನಲ್ಲಿ ಸುಮಾರು 100 ರಿಂದ 150 ಜನರು ಸೇರಿದರೆ ಅದು ಭಾರಿ ಕಾರ್ಯಕ್ರಮವಾಗುತ್ತದೆ ಎಂದು ಮಾನ್ಯ ಅಶೋಕ್‌ರವರು ಇಲ್ಲಿ ಲಾಂಜ್‌ನಲ್ಲಿ ಕುಳಿತುಕೊಂಡಾಗ ಈಗಲೂ ಸಹ ಹೇಳುತ್ತಿರುತ್ತಾರೆ. ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಯಾವುದರ ಬಗ್ಗೆಯೂ ತೀರ್ಮಾನ ಮಾಡಬೇಕಾದರೂ ಕೂಡ ಉದಾಹರಣೆಗೆ 'ನಮ್ಮ ಗ್ರಾಮ ನಮ್ಮ ರಸ್ತೆ'ಯಲ್ಲಿ ನೀವು 20 ಕಿ.ಮೀ.ಗೆ ಕೊಟ್ಟಿದ್ದೀರಿ. ನಾನು ಬೇರೆಯವರಿಗೆ ಕೊಡಬೇಡಿ ಎಂದು ಹೇಳುವುದಿಲ್ಲ. ನೀವು ಕಿ.ಮೀ.ನ ಆಧಾರದ ಮೇಲೆ maintenance ಗೆ ಹಣವನ್ನು ಕೊಡಿ ಹೋದ ವರ್ಷ ಮತ್ತು ಆಚೆ ವರ್ಷ ಮಾಡಿರುವಂತಹ ಕಾರ್ಯಕ್ರಮಗಳಿಗೆ ನಮ್ಮ ಗ್ರಾಮದ ರಸ್ತೆಗಳಿಗೆ maintenance ಮುಗಿದಿದೆ. ಆದರೆ patch ಹಾಕುವುದಕ್ಕೆ ದುಡ್ಡಿಲ್ಲ. ಮಾನ್ಯ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್‌ರವರಿಗೆ ಬಹಳ ಕಳಕಳಿ ಇದೆ. ಅವರು ಹೇಳಿದ ಮಾತು ಎಷ್ಟು ಚೆನ್ನಾಗಿತ್ತೆಂದರೆ ನಾನು ಬಂದ ಮೇಲೆ ಹಣವನ್ನು ಕೊಟ್ಟಿದ್ದೇನೆ ನಾನು ಕೊಟ್ಟಿಲ್ಲವೆಂದು ಹೇಳುತ್ತಿಲ್ಲ. ಆದರೆ ಇವರು ಹೆಸರುಗಳನ್ನು ಬದಲಾವಣೆ ಮಾಡಿರುವುದನ್ನು ಬಿಟ್ಟರೆ ಅದಕ್ಕಾಗಿ ಹೆಚ್ಚು ಹಣ ಏನೂ ಬರಲಿಲ್ಲ. ಅಲ್ಲಿ ಪ್ಯಾಚ್ ಹಾಕುವುದಕ್ಕೆ ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದಾರೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಎಲ್ಲಾ ಸದಸ್ಯರು, ಇದಕ್ಕೆ ಶಾಸಕರು ಅಧ್ಯಕ್ಷರು, ನಮ್ಮನ್ನು ಕೂರಿಸಿಕೊಂಡು ಅವರು ಶಾಸಕರೆ ನಿಮಗೇನು ಬಿಡಿ ನೀವು ಸರ್ಕಾರದಿಂದ ಬೇರೆ ತೆಗೆದುಕೊಂಡು ಬರಬಹುದು, ನೀವು ಸ್ವಲ್ಪ

ನನ್ನ ಕ್ಷೇತ್ರಕ್ಕೂ ಕೊಡಿ ಎಂದು ಅಂದರು. ನಾನು ಅಲ್ಲಿ ಕುಳಿತುಕೊಂಡು ಮೂರು ತಾಲ್ಲೂಕಿನ ಮೆಂಬರ್ಸ್‌ಗಳಿಗೆ ನೀವೆಲ್ಲರೂ ಸೇರಿಕೊಂಡು ಒಮ್ಮತದಿಂದ ಒಂದು ಪಟ್ಟಿಯನ್ನು ಕೊಟ್ಟುಬಿಡಿ ಅದಕ್ಕೆ ನಾನು ಸಹಿಯನ್ನು ಹಾಕಿಕೊಡುತ್ತೇನೆಂದು ಹೇಳಿದೆ. ನಾನು ಆ ಪಟ್ಟಿಗೆ ಸಹಿ ಹಾಕಿ ಕೊಟ್ಟುಬಂದೆ. ಈ ಸ್ಥಿತಿಯು ನಿರ್ಮಾಣವಾಗುತ್ತದೆ. ಹಾಗಾಗಿ ಮಲೆನಾಡಿನಲ್ಲಿ ನಮ್ಮಲ್ಲಿ ಆಗಿರುವಂತಹ ಮಳೆಯ ಹೊಡೆತಕ್ಕೆ ಡ್ಯಾಂಗಳು ಪೂರ್ತಿ ತುಂಬಿ ಅವರ್ಯಾರು ಶರಾವತಿಯಲ್ಲಿ ಹೂಳು ತೆಗೆಯಬೇಕೆಂದು ಹೇಳಿದರು. ನಮ್ಮ ಕಡೆಯಲ್ಲಿ ಜಾಸ್ತಿ ಮಳೆ ಬಂದಿದ್ದರಿಂದಾಗಿ ಆ ಹೂಳು ನಮ್ಮಲ್ಲಿಂದ ಬಂದಿದೆ ಅದು ನಮ್ಮ ಊರಿನ ಮಣ್ಣು ಆಗಿದೆ. ಅಲ್ಲಿಗೆ ಮಳೆಯಿಂದ ತೊಯ್ದುಕೊಂಡು ಬಂದಿರುವ ಮಣ್ಣಾಗಿದೆ. ಅದರಿಂದಾಗಿ ಟಾರು ಸಹ ತೊಯ್ದುಕೊಂಡು ಹೋಗಿದೆ. ಕಡೆಯ ಪಕ್ಷ ಈ ರಾಜ್ಯದ ಕರೆಂಟ್ ಉತ್ಪಾದನೆಗೆ ಕೊಡುಗೆ ಕೊಟ್ಟಿದ್ದೇವೆ. ಈ ರಾಜ್ಯದ ರೈತನಿಗೆ ಬೆಳೆಯನ್ನು ಬೆಳೆಯುವುದಕ್ಕೆ ನೀರನ್ನೂ ಸಹ ಕೊಟ್ಟಿದ್ದೇವೆ. ಇವತ್ತು ಊಟ ಮಾಡುವುದಕ್ಕೆ ಅಕ್ಕಿಯನ್ನು ಸಹ ಕೊಟ್ಟಿದ್ದೇವೆ. ನಮ್ಮ ರಸ್ತೆಗಳು ತೊಳೆದುಹೋಗಿದೆ ಹೇಳುವಂತಹದ್ದಕ್ಕೆ ಸರ್ಕಾರವು ಒಂದು ವಿಶೇಷವಾದಂತಹ ಪ್ಯಾಕೇಜ್ ಅನ್ನು ಮಲೆನಾಡಿಗೆ ಕೊಡಬೇಕೆನ್ನುವಂತಹ ಕಳಕಳಿ ಮಳೆಗಾಲದಲ್ಲೂ ಸಹ ಬರಲಿಲ್ಲ ಈ ಬಜೆಟ್‌ನಲ್ಲಿಯೂ ಸಹ ಬರಲಿಲ್ಲ. ಈ ಪ್ಯಾಕೇಜ್ ಬರದೆ ಇರುವುದರಿಂದ ಇವತ್ತಿನದಿವಸ ಊರಿಗೆ ಹೋದರೆ ಕರೆಂಟ್ ಸಹ ಇಲ್ಲದಾಗಿದೆ. ಮಳೆಗಾಲದಲ್ಲಿ ಒಲೆಯಲ್ಲಿ ನೀರು ಬರುತ್ತದೆ. ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಸುಮಾರು 2-3 ಕಿ.ಮೀ. ದೂರಕ್ಕೆ ಹೋಗಬೇಕಾದಂತಹ ಸ್ಥಿತಿಯಲ್ಲಿ ಮಲೆನಾಡು ಇದೆ. ಈ ಸ್ಥಿತಿಯಲ್ಲಿರುವಂತಹ ಜನರಿಗೆ ನೀವು ಸರ್ಕಾರದ ಕಡೆಯಿಂದ ಬಜೆಟ್‌ನಲ್ಲಿ ಎಷ್ಟು ಹಣವನ್ನು ಕೊಡುತ್ತಿದ್ದೀರಿ. ಮಲೆನಾಡಿಗೆ ವಿಶೇಷವಾಗಿ ತೊಳೆದುಹೋಗಿರುವಂತಹ 8 ಜಿಲ್ಲೆಗಳಿಗೆ ಸ್ವಲ್ಪ ಹೆಚ್ಚು ಹಣವನ್ನು ಇದಕ್ಕಾಗಿ ಇಷ್ಟು ಹಣವನ್ನು ಕೊಡುತ್ತೇನೆಂದು ಸರ್ಕಾರವು ಹೇಳಬೇಕಾಗಿತ್ತು. ಆ ಬಗ್ಗೆ ಹೇಳದೇ ಇರುವುದು ನಮ್ಮ ಮುಖ್ಯಮಂತ್ರಿಗಳ ಅನುಭವ ಮತ್ತು 9 ವರ್ಷಗಳ ಸುದೀರ್ಘವಾದ ಬಜೆಟ್ ಮಂಡನೆಯಾಗಿದೆ. ಈ ವರ್ಷ ಅವರ ಕೈ ಎಷ್ಟು ಗಟ್ಟಿಯಾಗಿದೆ ಎಂದರೆ ಹಿಂದೆ ಅವರು

ಉಪಮುಖ್ಯಮಂತ್ರಿಯಾಗಿ ಬಜೆಟ್ ಅನ್ನು ಮಂಡಿಸುತ್ತಿದ್ದರು. ಈ ಸಾರಿ ಅವರು ಮುಖ್ಯಮಂತ್ರಿಯಾಗಿ ಬಜೆಟ್ ಮಂಡಿಸುತ್ತಿದ್ದಾರೆ. ಎಲ್ಲಾ ಪರಮಾಧಿಕಾರವನ್ನು ಹೊಂದಿರುವಂತಹ ಮುಖ್ಯಮಂತ್ರಿಗಳು ಮಲೆನಾಡು ಕಡೆಗೆ ಗಮನ ಹರಿಸಬೇಕಾಗಿತ್ತು ಎನ್ನುವುದು ನನ್ನ ವಿಶೇಷವಾದ ಕಳಕಳಿ ಇದೆ. ಇದು ಬಹಳ ಕಷ್ಟ ಇದೆ. ನಮ್ಮ ಕಾನೂನು ಸಚಿವರೂ ಸಹ ಕೊಪ್ಪಕ್ಕೆ ಬಂದಿದ್ದರು. ಅವರು ಬಂದಾಗ ಹೇಳಿದ್ದರು, ಆವತ್ತಿನ ಸಭೆಯಲ್ಲಿ ಕೇಂದ್ರದ ಮಂತ್ರಿಗಳು ಸಹ ಇದ್ದಂತಹ ಸಂದರ್ಭದಲ್ಲಿ ತಾವು ಮತ್ತು ಇವತ್ತಿನ ಮುಖ್ಯಮಂತ್ರಿಗಳು ಸಹ ಇದ್ದರು. 1400 ಕೋಟಿ ರೂಪಾಯಿಗಳನ್ನು ಹಳದಿ ಎಲೆ ರೋಗಕ್ಕೆ ಪ್ಯಾಕೇಜ್ ಅನ್ನು ಕೊಡುತ್ತೇವೆ. ತಾವು ಗೋರಖ್ ಸಿಂಗ್ ವರದಿಯನ್ನು ಜಾರಿಗೆ ತರುತ್ತೇವೆಂದು ಹೇಳಿದ್ದರು. ದುರಾದೃಷ್ಟಕ್ಕೆ ಗೋರಖ್ ಸಿಂಗ್ ವರದಿ table ಆಗಿಲ್ಲ. ಇವತ್ತು ನಾವು ಅದರ ಬಗ್ಗೆ ಮಾತನಾಡುತ್ತೇವೆ. ಯಾವುದಾದರೊಂದು ವರದಿ table ಆಗದೇ ಇರುವಂತಹ ವರದಿಯ ಬಗ್ಗೆ ಮಾಡನಾಡುವುದಕ್ಕೆ ಆಗುತ್ತದೆಯೇ? ಆ ವರದಿಯು ಮೊದಲು ಕೇಂದ್ರದಲ್ಲಿ table ಆಗಿ ಅದನ್ನು ಸರ್ಕಾರವು ಒಪ್ಪಿಕೊಳ್ಳಬೇಕೆನ್ನುವಂತಹ ಮೊದಲನೆಯ ವಾದವನ್ನು ಮಾಡುತ್ತೇನೆ. 1400 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ, ಅದು ಸರಿ ಇರಲಿಲ್ಲ, ಅದು ಹೆಚ್ಚು ಎಂದು ನನಗೂ ಸಹ ಗೊತ್ತಿದೆ. ಅದು ಎಲೆಕ್ಷನ್‌ಗಾಗಿ ಎಂದು ಹೇಳಿದೆ ಎಂದು ಆಗಿಹೋಗಿತ್ತು. 1400 ಕೋಟಿ ರೂಪಾಯಿಗಳಲ್ಲಿ ಕರ್ನಾಟಕ ಸರ್ಕಾರವು ಸುಮಾರು 140 ಕೋಟಿ ರೂಪಾಯಿಗಳನ್ನಾದರೂ ಕೊಡಬೇಕಲ್ಲಾ? 10ನೇ ತಾರೀಖು ಮೊನ್ನೆ ಕುಡಿಯುವ ನೀರಿಲ್ಲದೆ ಇರುವಂತಹ ರೀತಿಯಲ್ಲಿ ಬಂದ್. ಮಲೆನಾಡು ಭಾಗದ ನಮ್ಮ ಭಾಗದ ಹಳದಿ ಎಲೆ ರೋಗಪೀಡಿತ ರೈತರು ಹಾಕಿಕೊಂಡಿದ್ದರು. ಅದನ್ನು ಏತಕ್ಕೆ ಹಾಕಿಕೊಂಡಿದ್ದರು ಎಂದರೆ ಬಜೆಟ್‌ಗಿಂತ ಮುಂಚಿತವಾಗಿ ಮಾನ್ಯ ಮುಖ್ಯಮಂತ್ರಿಯವರ ಗಮನಸೆಳೆಯುತ್ತೇವೆಂದು ಹಾಕಿಕೊಂಡಿದ್ದರು. ಅಲ್ಲಿಗೆ ಎಲ್ಲಾ ಪಕ್ಷದ ನಾಯಕರುಗಳು ಬಂದು ಭಾಷಣ ಮಾಡಿ ಹೋದರು. ಅವರು ಮತ್ತು ಇವರು ಎಂದು ಇಲ್ಲ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರಿಂದ ಹಿಡಿದು

ಕಾಂಗ್ರೆಸ್‌ನ ನಾಯಕರಿಂದ ಬಿಜೆಪಿ ನಾಯಕರ ತನಕ ಎಲ್ಲರೂ ಅಲ್ಲಿಗೆ ಬಂದು ಹೋದರು. ಎಲ್ಲರೂ ಸಹ ನಾವು ಈ ಬಗ್ಗೆ ವಿಧಾನಸಭೆಯಲ್ಲಿ ಹೇಳುತ್ತೇವೆ. ಈ ಬಗ್ಗೆ ಹಣವನ್ನು ಕೊಡಿಸುವಂತಹ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು. ಇಲ್ಲಿ ಆಶ್ಚರ್ಯ ಅಂದರೆ, ಪುಸ್ತಕದಲ್ಲಿ 1476 ಕೋಟಿ ತೋಟಗಾರಿಕೆಗೆ ಎಂದು ಏನೋ ಇದೆ. ಅದು ಅಡಿಕೆ ಸುಲಿಯುವ ಮಿಷನ್‌ನಿಂದ ಹಿಡಿದು ಟ್ರ್ಯಾಕ್ಟರ್, ಟಿಲ್ಲರ್, ಎಲ್ಲದಕ್ಕೂ ಸಬ್ಸಿಡಿಯನ್ನು ಕಳೆದುಕೊಂಡು ಸುಣ್ಣ, ಮೈಲುತುತ್ತ, ಕಾಳಮೆಣಸು ಎಲ್ಲವೂ ಸೇರಿಕೊಂಡಿದೆ ಎಂದು ನನಗೂ ಸಹ ಗೊತ್ತಿದೆ. ಆದರೆ ಅಲ್ಲಿ ನಿಂತುಕೊಂಡು ಭಾಷಣ ಮಾಡುತ್ತಾರೆ. ನಾವು 1400 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು, ನೋಡಿ ಇಲ್ಲಿ 1476 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ತೋರಿಸುತ್ತಾರೆ. ಈ ದುಡ್ಡನ್ನು ಹಳದಿ ಎಲೆ ರೋಗ ಪೀಡಿತ ರೈತರಿಗೆ ಕೊಡುವುದಾದರೆ ನಾನು ಅತ್ಯಂತ ಹೆಮ್ಮೆಯಿಂದ ಮತ್ತು ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಈ ದುಡ್ಡನ್ನು ಪೂರ್ತಿ ಹಳದಿ ಎಲೆ ರೋಗ ಬಂದಿರುವ ರೈತರಿಗೆ ಕೊಡುತ್ತೇವೆಂದು ಹೇಳಿದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ದ್ರಾಕ್ಷಿ ಬೆಳೆಗಾರರಿಗೆ, ಇನ್ನೂ ಯಾರ್‍ಯಾರು ಇದ್ದಾರಲ್ಲಾ ತೆಂಗು, ದ್ರಾಕ್ಷಿ, ಪಾಮ್, ದಾಳಿಂಬೆ, ಈ 1476 ಕೋಟಿ ರೂಪಾಯಿಗಳಲ್ಲಿ ಯಾರ್‍ಯಾರಿಗೆ ಕೊಡುತ್ತೀರಿ? ಈ ತರಹದ ಸನ್ನಿವೇಶವನ್ನು ನಿರ್ಮಾಣ ಮಾಡಿ ಅಲ್ಲಿರುವಂತಹ ನಮ್ಮೂರುಗಳು ಅಕ್ಷರಶಃ ಇವತ್ತು ವೃದ್ಧಾಶ್ರಮಗಳಾಗಿವೆ. ಮಕ್ಕಳು ಓದದೆ ಇರುವವರು ಹೋಟೆಲ್‌ಗಳಿಗೆ ಬಂದಿದ್ದಾರೆ. ಸ್ವಲ್ಪ ಸ್ವಲ್ಪ ಹೋಟೆಲ್‌ಗಳಿಗೆ ಬಂದಿರುವವರು ಎಲ್ಲೋ ಒಂದು ಕಡೆಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಾರೆ. ತಮ್ಮದು, ನಮ್ಮದು, ತೀರ್ಥಹಳ್ಳಿ, ಮೂರು similar ಇದೆ. ಇಲ್ಲಿ ಒಂದೇ ತರಹದ ಹೋರಾಟ ಇದೆ. ಇಲ್ಲಿ ಜನರು ಬಹಳ ಸಂಕಷ್ಟದಲ್ಲಿದ್ದಾರೆ. ಪಾಪ ಅವರು ಇಲ್ಲಿಂದ ಊರಿಗೆ ಬರಬೇಕಾದರೆ ನಾನು ಬೆಂಗಳೂರಿನಲ್ಲಿದ್ದೇನೆಂದು ಹೇಳಿ ಒಳ್ಳೆಯ ಷೂ ಹಾಕಿಕೊಂಡು ಊರಿಗೆ ಬರುತ್ತಾರೆ. ಅವ ಪಾಪ ಹೊಟ್ಟೆಬಟ್ಟೆ ಕಟ್ಟಿಕೊಂಡು ಏನು ಮಾಡಿದ್ದಾನೆಂದು ನನಗೆ ಗೊತ್ತಿಲ್ಲ. ಅಲ್ಲಿರುವಂತಹ ದುಡಿಯುವ ಕೈಗಳಿಗೆ ಕೆಲಸವನ್ನು ಕೊಡಿ.

ಅಲ್ಲಿರುವವರಿಗೆ ಕೆಲಸ ಆಗಲಿ. ಇಲ್ಲಿ ಚಳುವಳಿ ನಡೆಸುತ್ತಿರುವಂತಹ ರೈತರಿಗೆ ಸಾಂತ್ವನ ಹೇಳುವಂತಹ ಒಂದು ಪದವನ್ನೂ ಹೇಳಲಿಲ್ಲ. ಬಜೆಟ್ ಪುಸ್ತಕದಲ್ಲಿ ಅಡಿಕೆ ಮತ್ತು ತೆಂಗಿನ ಪುನಶ್ಚೇತನವನ್ನು ಮುಂದುವರಿಸಲಾಗುವುದು ಎಂದು ಒಂದೇ ಒಂದು ಲೈನ್‌ನಲ್ಲಿ ಹೇಳಿ ಮಾನ್ಯ ಮುಖ್ಯಮಂತ್ರಿಗಳು ಮುಗಿಸಿಬಿಟ್ಟರು. ಪುನಶ್ಚೇತನ ಎಂದರೆ ತಾವು ಎಷ್ಟು ಸಾರಿ ಮುಂದುವರೆಸುವುದಕ್ಕಾಗುತ್ತದೆ. ಒಂದು ತೋಟಕ್ಕೆ ಒಂದು ಸಾರಿ ಪುನಶ್ಚೇತನ ಕೊಡುವುದು ಅದಕ್ಕೆ ನಾಲ್ಕು ಸಾರಿ ಕೊಡುವುದಕ್ಕೆ ಬರುವುದಿಲ್ಲ. ಅದಕ್ಕೆಂದು 7,500 ರೂಪಾಯಿಗಳನ್ನು ಕೊಡುತ್ತಾರೆ. ಪ್ರತಿ ಹೆಕ್ಟೇರ್‌ಗೆ 15,000 ರೂಪಾಯಿಗಳನನು ಕೊಡುತ್ತೇವೆ. 50% ರೈತ ಹಾಕಬೇಕು. ಅಂದರೆ ಅಲ್ಲಿಗೆ 7,500 ರೂಪಾಯಿಗಳು. ಅಂದರೆ ಎಕರೆಗೆ ಎಷ್ಟು ಎಂದರೆ 2,750 ರೂಪಾಯಿಗಳಾಗುತ್ತದೆ. ಇದನ್ನು ಕೇಳಿದರೆ ಬಹಳ ಆಶ್ಚರ್ಯವಾಗುತ್ತದೆ. ಮೊನ್ನೆ ಪ್ರವಾಹ ಬಂದಾಗ ಪ್ರತಿ ಎಕರೆಗೆ 2,500 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿಬಿಟ್ಟರು. ಪಾಪ ರೈತರು ಅಲ್ಲಿಗೆ ಹೋದರು. ಪಹಣಿಯಲ್ಲಿ ಅಡಿಕೆ ಎಂದು ಬರೆಸಿಕೊಂಡರು ಅಲ್ಲಿರುವಂತಹ ವಿ.ಎ.ಗಳಿಗೆ ಹಣ ಕೊಟ್ಟು ತಾಯಿಗಿಂತ ಮಗಳಿಗೆ ವಯಸ್ಸು ಜಾಸ್ತಿಯಾಗಿದೆ ಅಲ್ಲಿ ಅವನಿಗೆ ಬಂದಿರುವಂತಹ 2,500 ರೂಪಾಯಿಗಳಿಗಿಂತ ಖರ್ಚಾಗಿರುವುದೇ ಜಾಸ್ತಿಯಾಗಿದೆ. ಆದರೆ ಅಲ್ಲಿ ಅವನ ಪರಿಸ್ಥಿತಿ ಹೇಗೆ ಆಗಿದೆ ಎಂದರೆ ಅವನಿಗೆ ಸಣ್ಣ ರೈತ ಎಂದು ಹೇಳುವಂತಹ certificate ಬೇಕು. ಶಿವಣ್ಣಗೌಡ ಎಂಬಾತ ಮುತ್ತಿನಕೊಪ್ಪ, ಹಳಿಯೂರುನವನು ಅಲ್ಲಿಗೆ ಹೋಗಿ ಕೇಳಿದಾಗ ನಿನಗೆ ನಾನು ಸಣ್ಣ ರೈತ ಎಂದು certificate ಕೊಡುವುದಿಲ್ಲವೆಂದು ಹೇಳಿದ್ದಾರೆ. ಮೊನ್ನೆ ದಿನ ನೀನು ಪ್ರವಾಹ ಬಂದಾಗ ಅಡಿಕೆಗೆ ದುಡ್ಡು ತೆಗೆದುಕೊಂಡಿದ್ದೆಯಲ್ಲಾ, ಅಡಿಕೆಗೆ ಕೊಳೆರೋಗ ಬಂದು ಬಿದ್ದಿದೆ ಎಂದು ಅವನಿಗೆ 1100 ರೂಪಾಯಿಗಳು ಸಿಕ್ಕಿದೆ. ನೀನು ಅಡಿಕೆಗೆ ಎಂದು 1100 ರೂಪಾಯಿ ತೆಗೆದುಕೊಂಡಿದ್ದೀಯಾ ಈಗ ನೀನು ದೊಡ್ಡ ರೈತ ಆಗಿದ್ದೀಯಾ ಎಂದು ಹೇಳಿದ್ದಾರೆ. ಅವರು ನನ್ನ ಹತ್ತಿರ ಬಂದು ಸಣ್ಣ ರೈತ ಎಂದು certificate ಬೇಕೆಂದು ಹೇಳಿದರು ಆಗ ನಾನು ಎಂತಕ್ಕೆ ಎಂದು ಕೇಳಿದೆ. NREG ಗೆ ಎಂದು ಒಂದು ಸಣ್ಣ ರೈತ ಎಂದು certificate

ಬೇಕಾಗಿದೆ ನಾನು ಬಾವಿಯನ್ನು ತೋಡಿಸುತ್ತಿದ್ದೇನೆ ಎಂದು ಹೇಳಿದ. ನಾನು ತಹಶೀಲ್ದಾರ್‌ರವರಿಗೆ ಕೇಳಿದೆ ಆಗ ಅವನು ನಾನು ಸಣ್ಣ ರೈತ ಎಂದು certificate ಕೊಟ್ಟರೆ ನಾನು ಜೈಲಿಗೆ ಹೋಗಿಬಿಡುತ್ತೇನೆ ಆದ ಕಾರಣ ನಾನು ಕೊಡುವುದಿಲ್ಲ ಎಂದು ತಹಶೀಲ್ದಾರ್‌ರವರು ಹೇಳಿದರು. ನಾನು ಹೇಗೆ ಎಂದು ಕೇಳಿದೆ ಮೊನ್ನೆ ದಿನ ನಾನು ಅವನಿಗೆ ಅಡಿಕೆ ತೋಟ ಇದೆ ಎಂದು ದುಡ್ಡು ಕೊಟ್ಟಿದ್ದೇನೆಂದು ಹೇಳಿದರು. ನಾನು ಎಷ್ಟು ಹಣ ಕೊಟ್ಟಿದ್ದೀರೆಂದು ಕೇಳಿದಾಗ ಅವರು 1100 ರೂಪಾಯಿಗಳನ್ನು ಕೊಟ್ಟಿದ್ದೇನೆಂದು ಹೇಳಿದರು. ಅವನು 1100 ರೂಪಾಯಿಗಳನ್ನು ತೆಗೆದುಕೊಂಡು ಈ ಕಡೆ ಅವನಿಗೆ ಸಣ್ಣ ರೈತ ಎಂದು certificate ಸಹ ಸಿಗುವುದಿಲ್ಲ. NREG work ಸಹ ಮಾಡುವ ಹಾಗಿಲ್ಲ. ನಮ್ಮ ಸರ್ಕಾರದಲ್ಲಿಯೂ ಹಣ ಕೊಟ್ಟಿತ್ತು. ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಏನು ಮಾಡಿತ್ತು ಎಂದು ಜನರು ನಮ್ಮನ್ನು ಕೇಳುತ್ತಾರೆ. ನಾವು ಒಳ್ಳೆಯದನ್ನು ಮಾಡಿರುವ ಬಗ್ಗೆ ಹೇಳಬೇಕಾಗುತ್ತದೆ. ಸುವರ್ಣ ಭೂಮಿಗೆ ಕೊಡುತ್ತಾ ಎಲ್ಲಾ ಊರಿನಲ್ಲಿಯೂ 5,000 ದಂತೆ ಕೊಟ್ಟರು. ಅದನ್ನು ಹೇಗೇ ಕೊಟ್ಟಿದ್ದೇವೆಂದರೆ ನೀನು ಒಬ್ಬ ರೈತ ನಿನ್ನ ಅಕೌಂಟ್ ನಂಬರ್ ಹಾಕಿ ಕೊಡು ಮೊದಲನೆಯದಾಗಿ 5,000 ನಂತರ ಮತ್ತೆ 5,000 ಒಟ್ಟು ನೀನು 10,000 ರೂಪಾಯಿಗಳನ್ನು ತೆಗೆದುಕೊಂಡು ಹೋಗು ಎಂದು ಸುವರ್ಣ ಭೂಮಿ ಯೋಜನೆಯಲ್ಲಿ ಮಾಡಿದ್ದೆವು. ಅಡಿಕೆಯು ಪೂರ್ತಿ ನೆಲಕ್ಕೆ ಬಿದ್ದುಹೋಗಿ ಕೊಳೆತು ಬಿದ್ದಿದೆ ಕೆಳಗೆ ಬಿದ್ದಿರುವಂತಹ ಅಡಿಕೆಯನ್ನು ಹೆರಕದಿದ್ದರೆ ಮತ್ತೆ ಕೊಳೆರೋಗ ಬಂದು ಅಡಿಕೆಮರವು ಸಾಯುತ್ತದೆ. ಅದರ ಮೇಲೆ ಸುಣ್ಣವನ್ನು ಹಾಕಬೇಕು. ನಮ್ಮ ಅಡಿಕೆಕಾಯಿ ಬಿದ್ದಿರುತ್ತದೆಯಲ್ಲಾ ಅದಕ್ಕೆ ಕೊಳೆ ಜಾಸ್ತಿಯಾದರೆ ಅದಕ್ಕೆ ಸುಣ್ಣವನ್ನು ಹಾಕಬೇಕು ಇಲ್ಲಾ ಅಂದರೆ ಕೆರೆದು ತೆಗೆಯಬೇಕು ಇಲ್ಲದೆಹೋದರೆ ಅದು fungus ಜಾಸ್ತಿಯಾಗಿ ಮರಕ್ಕೆ ಹೋದರೆ ಮರವು ಸಾಯುತ್ತದೆ. ಆ ಸುಣ್ಣ ಹಾಕುವುದಕ್ಕೆ ಈ ದುಡ್ಡು ಸಾಕಾಗಲಿಲ್ಲ ಅಲ್ಲಿ ಈ ಪರಿಸ್ಥಿತಿ ಇದೆ. ಹಾಗಾಗಿ ದಯಮಾಡಿ ಒಂದು ಪಾಲಿಸಿಯನ್ನು ಮಾಡಬೇಕಾದರೆ ಅಡಿಕೆಗೆ ಇದು ಕೊಟ್ಟಿದ್ದಿಯಾ, ಅದಕ್ಕಾಗಿ ನಿನಗೆ ಸಣ್ಣ ರೈತ ಎಂದು certificate ಕೊಡುವುದಿಲ್ಲ. ಈ NREG workಗೂ ಈ ರೀತಿಯಾಗಿ

tight ಮಾಡುವುದು ಸರಿಯಾಗುವುದಿಲ್ಲ. ಇದರ ಬಗ್ಗೆ ಸರ್ಕಾರವು ಕಳಕಳಿಯ ಆಲೋಚನೆಯನ್ನು ಮಾಡಬೇಕಾಗುತ್ತದೆ. ನಾವು ಇಷ್ಟೆಲ್ಲಾ ಅಡಿಕೆಯ ಬಗ್ಗೆ ಹೇಳುತ್ತಿದ್ದೇವೆ. ಸುಮ್ಮನೆ ಏಕೆ ಹೇಳುತ್ತಿದ್ದೇವೋ ಗೊತ್ತಿಲ್ಲ. ಮಲೆನಾಡಿನಲ್ಲಿ ಎಲ್ಲಿದೆ ಜಾಗ ಎಂದು ಬೇಕಾಗಿದೆಯಲ್ಲಾ. ನಮ್ಮ ಜಾಗವೆಲ್ಲಾ ಕಿತ್ತುಕೊಂಡು ಹೋಗುತ್ತಿದೆ. ನಮ್ಮ ಜಾಗದ ಪರಿಸ್ಥಿತಿ ಅಧ್ಯಕ್ಷರೆ, ನನಗೆ ಆಶ್ಚರ್ಯ ಎಂದರೆ ಈ ಒತ್ತುವರಿಯನ್ನು ಖುಲ್ಲಾ ಮಾಡುತ್ತೇವೆಂದು ಹೇಳುವಂತಹ ಹೆಸರಿನಲ್ಲಿ ಅಧಿಕಾರಿಗಳು ಯಾವ ರೀತಿಯಾಗಿ ದೌರ್ಜನ್ಯ ಮಾಡುತ್ತಿದ್ದಾರೆಂದರೆ ನಮ್ಮ ಊರಿನ ಹೊನ್ನೆಕೂಡಿಗೆ ಎನ್ನುವಂತಹರಲ್ಲಿ ಒಂದು ಆಚಾರ್ಯರ ಮನೆ ಇದೆ. ಇದು ಬಹಳ important ವಿಷಯವಾಗಿದೆ. ಇದು ನನ್ನದು ಮತ್ತು ನಿಮ್ಮದು ಎಲ್ಲರಿಗೂ ಸೇರಿರುವ ಒಂದು ವಿಷಯ ಆಗಿದೆ. ಅಧ್ಯಕ್ಷರು, ಇದು ಬಹಳ ಮುಖ್ಯವಾದ ವಿಷಯ, ಇದನ್ನು ಮಾತನಾಡಲಿಕ್ಕೆ ನನಗೆ 5 ನಿಮಿಷ ಸಮಯ ಜಾಸ್ತಿ ಕೊಡಬೇಕು. ನಿಮಗೆ ಹೇಳುವುದಕ್ಕಾಗದೆ ಇರುವುದನ್ನು ನಾನು ಹೇಳುತ್ತಿದ್ದೇನೆ ಅಧ್ಯಕ್ಷರೆ, ಆಚಾರ್‌ರ ಮನೆ ಹೇಗಿದೆ ಎಂದು ಹೇಳುತ್ತೇನೆ ಅಧ್ಯಕ್ಷರೆ, ಮೇಲ್ಗಡೆ ಕಾಡಿದೆ, ಕಾಡಿನ ಕೆಳಗೆ ಆಚಾರ್‌ರವರಿಗೆ 20X30 ಅಳತೆಯ ಸಣ್ಣ ಮನೆ, ಈ ಆಚಾರರು ಮತ್ತು ನೇಕಾರರಿಗೆ, ಆಚಾರರಿಗೆ ಮನೆಯೂ ಇರುವುದಿಲ್ಲ, ನೇಕಾರರ ಮನೆಯಲ್ಲಿ ಸೀರೆಯೂ ಇರುವುದಿಲ್ಲ. ಅವರು ಬೇರೆಯವರಿಗೆ ಮಾಡಿಕೊಡುವುದು. 20X30 ಇಷ್ಟೇ ದೊಡ್ಡ ಮನೆ. ಎದುರಿಗೆ ಕಣ. ಕಾನೂನು ಸಚಿವರು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಎದುರಿಗೆ ಕಣ, ಕಣದ ಎದುರಿಗೆ 50 ಅಡಿಕೆ ಮರಗಳು, ನಾನು ಹೇಳುವುದು ಸುಳ್ಳು ಎನ್ನುವುದಾದರೆ ಇವತ್ತಿನಿಂದ ನಾನು ಈ ಜಾಗದಲ್ಲಿರುವುದಿಲ್ಲ. ನೀವು ಅಧಿಕಾರಿಗಳನ್ನು ಕಳುಹಿಸಿ ಸಮೀಕ್ಷೆ ಮಾಡಿಸಿ. 50 ಅಡಿಕೆ ಗಿಡಗಳ ಎದುರಿಗೆ ಒಂದು ಮುಕ್ಕಾಲು ಎಕರೆ ಗದ್ದೆ ಇರಬಹುದು, ಅಷ್ಟೇ ಅವರ ಜಮೀನು. ಈ ಮನೆಗೂ ಮತ್ತು ಕಣಕ್ಕೂ ಮಧ್ಯೆ Forest Department ನವರು trench ಹೊಡೆದುಕೊಂಡು ಹೋಗಿದ್ದಾರೆ. ಈ 50 ಅಡಿಕೆ ಗಿಡದಲ್ಲಿ 25 ಅಡಿಕೆ ಗಿಡಗಳನ್ನು ಅವರು ಕಿತ್ತುಹಾಕಿದ್ದಾರೆ. ನಾನು ಹೋಗಿದ್ದೆನು. ನಮ್ಮೂರಿನಲ್ಲಿ ಜನ ಸೇರಿರುವುದಿಲ್ಲ. 250–300 ಜನ ಅಲ್ಲಿ

ಸೇರಿಕೊಂಡಿದ್ದಾರೆ. ಏನಪ್ಪಾ ಇದು ಪರಿಸ್ಥಿತಿ ಎಂದು ನಾನು ಹೋಗಿ ಕೇಳಿದೆ. Ranger ಅವರನ್ನು ಕರೆದು ಕೇಳಿದೆ, ಏನಪ್ಪಾ ಇದು ಪರಿಸ್ಥಿತಿ, ನೀನು ಕಣ್ಣಿನಲ್ಲಿ ನೋಡಿ ಹೇಳಿಬಿಡು. ನೀನು ನ್ಯಾಯ ಮಾಡಿದ್ದೇನೆ ಎಂದು ಹೇಳು, ನೀನು ಯಾರ ಪರ ಎಂದು ಹೇಳಿಬೇಡಿ ಎಂದು ಕೇಳಿದೆ. ಕಂದಾಯ ಸಚಿವರು ನೀವು ಇಲ್ಲಿದ್ದೀರಿ, ಅರಣ್ಯ ಸಚಿವರು ಇರಬೇಕಾಗಿತ್ತು. ಕೇಳಿದರೆ ಅವರು ಕೊಟ್ಟ ಉತ್ತರ ಅತ್ಯಂತ ನೋವು ಮತ್ತು ವಿಷಾದದಿಂದ ಹೇಳುತ್ತೇನೆ. ಸರ್, ನಾನು ಏನು ಮಾಡಲಿ ಸಮಾಜ ಪರಿವರ್ತನೆ ಸಮಿತಿಯವರು ಇಲ್ಲಿ ಬರುತ್ತಿದ್ದಾರೆ. ಅವರು ಬಂದು ನನಗೆ ಈ ರೀತಿ ಆದೇಶ ಕೊಟ್ಟಿದ್ದಾರೆಂದರು. ನಾನು ಹೇಳಿದೆ, ಎರಡು ಎಕರೆ ಜಾಗ ಇರುವವರಿಗೆ ನಮ್ಮ ಫಾರೆಸ್ಟ್ ಮಿನಿಸ್ಟರ್ ಅಧಿಕೃತವಾಗಿ ಸಹಿ ಮಾಡಿ ಇಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. "ಸದ್ಯಕ್ಕೆ 10 ಎಕರೆಯ ಮೇಲಿನ ಒತ್ತುವರಿಯನ್ನು ಖುಲ್ಲಾ ಪಡಿಸಲಾಗುವುದು." ಅಂದರೆ ಅದು ಸದ್ಯಕ್ಕೆ ಅದು 10 ಎಕರೆ ಒಳಗೆ ಇಲ್ಲವೆಂದಾಯಿತಲ್ಲಾ. ನಿಮ್ಮ ಅರಣ್ಯ ಸಚಿವರು ಹತ್ತು ಎಕರೆ ಮೇಲಿನದ್ದು ಮಾತ್ರ ಖುಲ್ಲಾ ಪಡಿಸುತ್ತೀರಿ ಎಂದು floor ನಲ್ಲಿ ಉತ್ತರ ಕೊಡುತ್ತಾರೆ. ಅಲ್ಲಿ ಒಂದು ಎಕರೆ, ಅರ್ಧ ಎಕರೆ, ಎರಡು ಎಕರೆ, ಮೂರು ಎಕರೆ ಇರುವವರಿಗೆ ನೋಟೀಸ್ ಕೋಡುತ್ತಿದ್ದೀರಿ. ನೋಟೀಸ್ ಕೊಡುವುದು ಮಾತ್ರವಲ್ಲ, trench ಹೊಡೆಯುತ್ತಿದ್ದೀರಿ, ಕೀಳುತ್ತಿದ್ದೀರಿ. ಚಿಕ್ಕ ಅಗ್ರಹಾರದಲ್ಲಿ ಒಬ್ಬ ಸಂತೋಷ್ ಶೆಟ್ಟಿ ಎಂಬುವವರು ಇದ್ದಾರೆ ನವೆಂಬರ್‌ನಲ್ಲಿ ಅವರಿಗೆ ಒಂದು ನೋಟೀಸ್ ಕೊಡುತ್ತಾರೆ. "ನಿನ್ನ ಜಾಗ ಅದು ಗೋಮಾಳಕ್ಕೆ ಸೇರುತ್ತದೆ" ಗೋಮಾಳದ ಜಾಗ ಇದು. ರವಿಯವರೆ, ಆ ದಾಖಲೆ ಕೊಡಿ ನನಗೆ.

ಅಧ್ಯಕ್ಷರು:– ಹೌದು, ಆಗ ತಿದ್ದುಪಡಿ ಮಾಡುವಾಗ ಎಲ್ಲಿ ಹೋಗಿದ್ದೀರಿ?

ಶ್ರೀ ಡಿ.ಎನ್. ಜೀವರಾಜ್:– ತಾವು ಅದನ್ನು ನೂರು ಸಲ ಹೇಳಿದ್ದೀರಿ. ಆದರೆ ಅದನ್ನು ತಿದ್ದುಪಡಿ ಮತ್ತೆ ಮಾಡಲಿ ಎನ್ನುವ ಕಾರಣಕ್ಕಾಗಿ ನಾನು ಹೇಳಿತ್ತಿದ್ದೇನೆ.

ಅಧ್ಯಕ್ಷರು:- ಅದಕ್ಕೆ ನಿಮ್ಮೆಲ್ಲರಿಗೂ ನಾನು ಹೇಳುತ್ತೇನೆ. ಈ ಮಲೆನಾಡಿನ ವಿಚಾರಕ್ಕೆ ಸಂಬಂಧಪಟ್ಟಂತೆ ಎಲ್ಲರೂ united ಆಗಿ ಒಂದು ಚರ್ಚೆ ಮಾಡಲಿಕ್ಕೆ ಎಂದಾದರೂ ಅವಕಾಶ ಮಾಡಿಕೊಂಡಿರುವಿರಾ?

ಶ್ರೀ ಡಿ.ಎನ್. ಜೀವರಾಜ್:- ಅಲ್ಲಿಗೆ ಬರುತ್ತೇನೆ ಅಧ್ಯಕ್ಷರೆ, ನೋಡಿ, ದಾಖಲೆಗಳಿವೆ ನೋಡಿ. ಇದನ್ನು ತಮಗೆ ಕಳುಹಿಸುತ್ತೇನೆ.

ಅಧ್ಯಕ್ಷರು:- ಎಲ್ಲರೂ ಇದ್ದಾರೆ, ಮಂತ್ರಿಗಳು ಇದ್ದಾರೆ.

ಶ್ರೀ ಡಿ.ಎನ್. ಜೀವರಾಜ್:- ಇದನ್ನು ತಮಗೆ ಕಳುಹಿಸುತ್ತೇನೆ.

ಅಧ್ಯಕ್ಷರು:- ನನ್ನ ಹತ್ತಿರ ಎಲ್ಲಾ ದಾಖಲೆಗಳಿವೆ.

ಶ್ರೀ ಡಿ.ಎನ್. ಜೀವರಾಜ್:- ಇದನ್ನು ಸ್ವಲ್ಪ ಹೇಳಿಬಿಡುತ್ತೇನೆ, ಒಂದು ನಿಮಿಷ, ನವೆಂಬರ್‌ನಲ್ಲಿ ನೋಟಿಸ್ ಕೊಡುತ್ತಾರೆ, ನೀನು ಗೋಮಾಳಕ್ಕೆ ಸೇರಿಕೊಂಡಿದೆಯೋ, ನಿನ್ನ ಜಾಗದಲ್ಲಿ ಮರ ಕಡಿದಿದೆ ಎಂದು. ಅವನು immediate ಆಗಿ 'ನನ್ನಿಂದ ಗೋಮಾಳದಲ್ಲಿ ಮರ ಕಡಿದಿರುವುದು ತಪ್ಪಾಗಿದ್ದರೆ ಸರ್ಕಾರ ವಿಧಿಸುವಂಥ ಶಿಕ್ಷೆಗೆ ನಾನು ಹಣವನ್ನು ಕಟ್ಟುತ್ತೇನೆ. ಮತ್ತು ನಾನು ನಿಮ್ಮ ಇಲಾಖೆ ಮೂಲಕ ಅದನ್ನು settle ಮಾಡಿಕೊಳ್ಳುತ್ತೇನೆಂದು' ಉತ್ತರದಲ್ಲಿ ಬರೆದುಕೊಡುತ್ತಾನೆ. ಅವನಿಗೆ ಡಿಸೆಂಬರ್‌ನಲ್ಲಿ ಒಂದು ನೋಟೀಸ್ ಕೊಡುತ್ತಾರೆ. ನೀನು ಕಿರು ಅರಣ್ಯದಲ್ಲಿ ಇದ್ದೀಯಾ, ಎರಡು ತಿಂಗಳಿಗೆ ಅದು ಕಿರು ಅರಣ್ಯ ಆಯಿತು. ಅದಾದ ಮೇಲೆ ನಾನು ಪಹಣಿ ತೆಗೆಸಿದೆ. ಪಹಣಿಯಲ್ಲಿ ಕಿರು ಅರಣ್ಯ ಎಂಬ ಪದ ಇಲ್ಲ, ಪಹಣಿಯಲ್ಲಿ ಏನಿದೆ ಅಂದರೆ ಮೇಜರುಮಕ್ಕಿ ಮೀಸಲು ಅರಣ್ಯ, reserved forest. ಮತ್ತು ಗೋಮಾಳ ಎರಡೂ ಇದೆ, ಎರಡೂ bifurcate ಆಗಿಲ್ಲ. ಇವನ ಜಾಗ ಗೋಮಾಳ ಎಂದು ತೀರ್ಮಾನವಾಗಿದೆ. ಆಶ್ಚರ್ಯ ಎಂದರೆ ನಿನ್ನೆಯಲ್ಲ, ಮೊನ್ನೆ ಒಂದು ನೋಟೀಸ್ ಕೊಟ್ಟಿದ್ದಾರೆ. 'ನಾವು ಕೈತಪ್ಪಿನಿಂದ ಇದನ್ನು ಗೋಮಾಳ ಎಂದು ಬರೆದಿದ್ದೆವು. ಆದರೆ ಅದು ಈಗ ಕಿರು ಅರಣ್ಯ ಆಗಿದೆ.' ಎಂದು. ಯಾರು ಈ forester? ಏನು ಮಾಡುತ್ತಿದ್ದಾರೆ? ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ರಾಜಕಾರಣವಾಗಿ ಇಲ್ಲಿರುವವರೆಲ್ಲಾ

ರಾಜಕಾರಣಿಗಳೇ. ನಾಳಿದ್ದು ಎಂ.ಪಿ. ಎಲೆಕ್ಷನ್ ಇದೆ. ಎಂ.ಪಿ. ಎಲೆಕ್ಷನ್ ಎದುರಿಗೆ ನಿಮ್ಮ ಅಧಿಕಾರಿಗಳು ಈ ರೀತಿ ವರ್ತನೆ ಮಾಡುತ್ತಿದ್ದಾರೆ, ನಿಮ್ಮ ಕಂಟ್ರೋಲ್‌ನಲ್ಲಿದ್ದಾರೋ ಇಲ್ಲವೋ ಗೊತ್ತಿಲ್ಲ. ನಾಳೆ ಬೆಳಿಗ್ಗೆ ಎಂ.ಪಿ. ಎಲೆಕ್ಷನ್ ಮುಗಿದರೆ ಬೆಳಿಗ್ಗೆ ಈ ಅಧಿಕಾರಿಗಳು ಏನು ಮಾಡುತ್ತಾರೆ ಎಂದು ಗೊತ್ತಿರಬೇಕು. ನಾನು ಹೊನ್ನೆಕುಡಿಕೆಯಲ್ಲಿ ನಿಂತುಕೊಂಡು ಕೇಳಿದೆ. ಅದೇ ಗಾರ್ಡ್, ಅದೇ ಫಾರೆಸ್ಟರ್, ಅದೇ ರೇಂಜರ್, ಅದೇ A.C.F., ಅದೇ DFO, ಅದೇ Conservator. ಅದೇ ಗ್ರಾಮ ಪಂಚಾಯತಿ ಸದಸ್ಯರು, ಅದೇ ತಾಲ್ಲೂಕು ಪಂಚಾಯತಿ ಸದಸ್ಯರು, ಅದೇ ಜಿಲ್ಲಾ ಪಂಚಾಯತಿ ಸದಸ್ಯರು, ಅದೇ ಎಂ.ಎಲ್.ಎ., ಅದೇ ಎಂ.ಪಿ., ನಿಮಗೆ ಏನು ರೋಗ ಆಯಿತು? ಇಲ್ಲಿ ಬದಲಾಗಿದೆ. ನೀವು ಈಚೆಯಿಂದ ಆಚೆ ಹೋಗಿದ್ದೀರಿ, ನಾನು ಆಚೆಯಿಂದ ಈಚೆ ಬಂದಿದ್ದೇವೆ. ಇಷ್ಟಕ್ಕೆ ಅಲ್ಲಿ ಅಷ್ಟು ಬದಲಾವಣೆ ಆಗಬೇಕೇ? ಕೆಳಗಡೆಯಿಂದ Guard, Forester, Rangerಗಳೆಲ್ಲಾ ಮಿಲಿಟರಿ ಆಗಿದ್ದಾರೆ.

ಅಧ್ಯಕ್ಷರು:- ಅಲ್ಲಿ ಅಲ್ಲ, ಆಡಳಿತ ನಡೆಸುವವರಲ್ಲಿ ಹೃದಯ ಅರಳಬೇಕು.

ಶ್ರೀ ಡಿ.ಎನ್. ಜೀವರಾಜ್:- ಮಾನ್ಯ ಅಧ್ಯಕ್ಷರೆ, ನಾನು ಅಂದೇ ಹೇಳಿದ. ಏನಾಗಿದೆಯಂದರೆ, ನಮ್ಮೆಲ್ಲರಿಗೆ ತಲೆ ಇದೆ, ಹೃದಯ ಇಲ್ಲ, ಹೃದಯ ಪೂರ್ತಿ ಕಿತ್ತುಕೊಂಡು ಹೋಗಿದೆ. ಅಲ್ಲಿರುವ ರೈತರನ್ನು ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಸಮಯ ಇಲ್ಲದಿರುವುದರಿಂದ ಹೆಚ್ಚಿಗೆ ಹೇಳಲಾಗುವುದಿಲ್ಲ, ಇಲ್ಲದಿದ್ದರೆ ಇನ್ನೂ ಹೆಚ್ಚಿಗೆ ಹೇಳುತ್ತಿದ್ದೆ. ಆದರೆ ಇವತ್ತಿನ ಪರಿಸ್ಥಿತಿ, ಈ ಒತ್ತುವರಿ ಬಗ್ಗೆ ನಾನು ಕಾನೂನು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಸಚಿವರೆ, ನೀವು ಒಂದು ಕೆಲಸ ಮಾಡಿ, ಎರಡು ಎಕರೆ, ಐದು ಎಕರೆ, ಗುಂಟೆ ಇರುವವರಿಗೆ free of cost.. ಅವನು ಎಪ್ಪತ್ತೈದು, ನೂರು ವರ್ಷದಿಂದ ಇದ್ದಾರೆ. Adverse possession ನಲ್ಲಿ ಅವನದ್ದೇ ಜಾಗ ಅದು. ಅವನಿಗೆ ಕೊಡಿ. ಹತ್ತು ಎಕರೆ ಇರುವವನಿಗೆ ಒಂದು slab ಅನ್ನು fix ಮಾಡಿ. ಇಪ್ಪತ್ತು ಎಕರೆ ಇರುವವನಿಗೆ ಒಂದು slab ಅನ್ನು fix ಮಾಡಿ. ಅದರ ಮೇಲಿರುವವನಿಗೆ ಸರ್ಕಾರ.. ಸಣ್ಣ ವರ್ಗದವರಿಗೆ ಮಾತ್ರ..

ಅಧ್ಯಕ್ಷರು:– ಸಾಕು, ಸಾಕು.

ಶ್ರೀ ಡಿ.ಎನ್. ಜೀವರಾಜ್:– ಇನ್ನೆರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಒಂದು ನಿಮಿಷ ನೀವು ಕೂಡಿ. ನಾನು ಮಾತನಾಡಿ ಮುಗಿಸಿ ಕುಳಿತುಕೊಳ್ಳುತ್ತೇನೆ. ಸರ್, ಮೂರು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು:– No, No, please, ಆಯಿತು, ಬಿಡಿ, ನಾನು ಹೇಳುವವರೆಗೂ ಕೇಳಿ, ಸುಮ್ಮನೆ ಚರ್ಚೆ ಮಾಡಬೇಡಿ, ಕೊನೆಯ ದಿವಸ ಈ ಧ್ವನಿ ಎತ್ತಿರಿ.

ಶ್ರೀ ಡಿ.ಎನ್. ಜೀವರಾಜ್:– ಮುಗಿಸುತ್ತೇನೆ. ಚಿಕ್ಕಮಗಳೂರು ಜಿಲ್ಲೆಗೆ ಒಂದು ಮೆಡಿಕಲ್ ಕಾಲೇಜು sanction ಆಗಿದೆ.

ಅಧ್ಯಕ್ಷರು:– ಆಯಿತು, ಅದನ್ನು ಕೊಡುತ್ತೇವೆಂದು ಹೇಳಿದ್ದಾರೆ ಬಿಡಿ.

ಶ್ರೀ ಡಿ.ಎನ್. ಜೀವರಾಜ್:– ಅವರು ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಎಂದು ಹೇಳಿದ್ದಾರೆ, ತಾವು confuse ಆಗಿದ್ದೀರಿ. ಜಿಲ್ಲೆಗೊಂದು ಹೇಳುತ್ತಾ ಈ ವರ್ಷ ಕೊಟ್ಟ ಐದರಲ್ಲಿ ಚಿಕ್ಕಮಗಳೂರು ಜಿಲ್ಲೆ ಇಲ್ಲ.

ಅಧ್ಯಕ್ಷರು:– ಮುಂದಿನ ವರ್ಷ ಕೊಡುತ್ತೇವೆಂದು ಹೇಳಿದ್ದಾರೆ ಬಿಡಿ.

ಶ್ರೀ ಡಿ.ಎನ್. ಜೀವರಾಜ್:– ಹೋದವರ್ಷವೂ ಅವರು ಹಾಗೆ ಹೇಳಿದ್ದರು.

ಅಧ್ಯಕ್ಷರು:– ಆಯಿತು, ಅವರು ಹಾಗೆ ಹೇಳುತ್ತಲೇ ಇರುತ್ತಾರೆ ಬಿಡಿ. ಸಾಕು. ನೀವು ಶುರು ಮಾಡಿ.

ಶ್ರೀ ಡಿ.ಎನ್. ಜೀವರಾಜ್:– ಅಧ್ಯಕ್ಷರೆ, ಒಂದು ನಿಮಿಷ, ಈ tiller and tractors ಕೊಡುತ್ತಾರೆ. ಅವುಗಳನ್ನು ಸ್ವಲ್ಪ ಜಾಸ್ತಿ ಕೊಡಲಿ.

ಅಧ್ಯಕ್ಷರು:– ಬೇಡ, ಬೇಡ, ಅದನ್ನೆಲ್ಲಾ ಈಗ ಮಾತನಾಡುವುದು ಬೇಡ. ನೀವು ಶುರು ಮಾಡಿ.

ಶ್ರೀ ಡಿ.ಎನ್. ಜೀವರಾಜ್:– ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಅಧ್ಯಕ್ಷರೆ, ಇಲ್ಲಿ ಜಲಸಂಪನ್ಮೂಲ ಸಚಿವರು ಇದ್ದಾರೆ, ಹಿಡಕಲ್ ಗಲಾಟೆಯಿದ್ದಂಥ ಮುಧೋಳ ತಾಲ್ಲೂಕು..

(ಗೊಂದಲ)

ಅಧ್ಯಕ್ಷರು:– ವಿಷಯ ಬೇರೆ, ಆಮೇಲೆ ಮಾತನಾಡಿ. ಬಾಲಕೃಷ್ಣರವರೆ ಮಾತನಾಡಿ, ಐದೇ ನಿಮಿಷ ಮಾತನಾಡಿ, ಈಗಾಗಲೇ 8 ಗಂಟೆಯಾಯಿತು.

ಶ್ರೀ ಸಿ.ಎನ್. ಬಾಲಕೃಷ್ಣ (ಶ್ರವಣಬೆಳಗೊಳ):– 2014–15 ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು 1,36,240 ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡನೆ ಮಾಡಿರುವುದು ಸ್ವಾಗತಾರ್ಹವಾದ ವಿಚಾರವಾಗಿದೆ. ಈ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಈ ಸಾಲಿನಲ್ಲಿ 1434.00 ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿದೆ. ಆದರೆ ನಮ್ಮ ಭಾಗದಲ್ಲಿ ಬಹುತೇಕ ತೆಂಗಿನ ಬೆಳೆಯನ್ನು ನಂಬಿ ಜೀವನ ಮಾಡುವಂಥ ಜನರು 70 ಭಾಗ ಇದ್ದಾರೆ. ಇವತ್ತು ತೆಂಗು 70 ಭಾಗದಷ್ಟು ಸರ್ವನಾಶವಾಗಿದೆ. ಇವತ್ತು ತೆಂಗಿನ ಮರಗಳಿಗೆ ಯಾವುದೇ ಒಂದು ಪರಿಹಾರವನ್ನು ಘೋಷಣೆ ಮಾಡಿಲ್ಲ. ಈ ಹಿಂದಿನ ಮೂರು ಸದನಗಳಲ್ಲಿಯೂ ಕೂಡ ನಾವು ತೆಂಗು ಬೆಳೆಯುವ ಪ್ರದೇಶಗಳ ಶಾಸಕರೆಲ್ಲರೂ ಸದನದ ಗಮನಕ್ಕೆ ತಂದರೂ ಕೂಡ ಈ ಬಜೆಟ್‌ನಲ್ಲಿ ಘೋಷಣೆ ಮಾಡದೆ ಇರುವುದು ನಿಜವಾಗಲೂ ಕೂಡ ಸರ್ಕಾರ ತೆಂಗಿನ ಬೆಳೆಗಾರರ ಸಂಕಷ್ಟಕ್ಕೆ ಬಂದಿಲ್ಲವೆಂಬ ಭಾವನೆಯನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಅದರ ಜೊತೆಗೆ ಮಾನ್ಯ ಜೀವರಾಜ್‌ರವರು ಸಹ ಗಮನಕ್ಕೆ ತಂದಿದ್ದಾರೆ. Re-plant ಮಾಡುವುದಕ್ಕೆ ಅವಕಾಶ ಕೊಡುತ್ತೇವೆಂದು ಹೇಳದ್ದಾರೆ. Re-plant ಮಾಡುವುದಕ್ಕೆ ತೇವಾಂಶದ ಕೊರತೆ ಇರುವುದರಿಂದ Re-plant ಮಾಡುವುದಕ್ಕೆ ಅವಕಾಶವೇ

ಇಲ್ಲದಿರುವುದರಿಂದ ದಯಮಾಡಿ ಅಂತರ್ಜಲದ ಕೊರತೆಯಿಂದ ಇವತ್ತು ರೈತ ಗುಳೆ ಹೋಗುವಂಥ ಸಂದರ್ಭ ನಮ್ಮ ಕ್ಷೇತ್ರಗಳಲ್ಲಿ ಇರುವಂಥ ಸಂದರ್ಭದಲ್ಲಿ ಸರ್ಕಾರ ಪರಿಹಾರ ಘೋಷಣೆಗೆ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತಿದ್ದೇನೆ. ಅದೇ ರೀತಿ ಪಶುಸಂಗೋಪನಾ ಇಲಾಖೆ ಈ ಹಿಂದಿನ ಸಾಲಿನಲ್ಲಿ 1675 ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿತ್ತು. 2014–15ನೇ ಸಾಲಿನಲ್ಲಿ 1757 ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿದೆ. ಇದರಲ್ಲಿ 4.00 ರೂಪಾಯಿಗಳನ್ನು ಹಾಲಿಗೆ ಸಹಾಯಧನವಾಗಿ 818 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಕುರಿ ಮೇಕೆಗೆ ಮೂರರಿಂದ ನಾಲ್ಕು ಸಾವಿರ ರೂಪಾಯಿಗಳನ್ನು ಪರಿಹಾರ ಕೊಟ್ಟಂಥ ಸಂದರ್ಭದಲ್ಲಿ ಕೊಡುವಂಥದ್ದಕ್ಕೆ ಘೋಷಣೆ ಆಗಿದೆ. ಆದರೆ ಹಸು, ಎಮ್ಮೆ, ದನಗಳ ಬಗ್ಗೆ ಗಮನ ಹರಿಸದಿರುವುದು, ಅದಕ್ಕೆ ಕೊಟ್ಟಿರುವುದು ಒಳ್ಳೆಯದು, ಆದರೆ ಇವತ್ತು ಒಬ್ಬ ರೈತ ಹಸುವನ್ನು ಸಾಕುವಂಥ ಸಂದರ್ಭದಲ್ಲಿ ಅದು ಅಸುನೀಗಿದರೆ ಮುವತ್ತರಿಂದ ನಲವತ್ತು ಸಾವಿರ ರೂಪಾಯಿಗಳ ನಷ್ಟವನ್ನು ಅನುಭವಿಸಬೇಕಾದಂಥ ಸ್ಥಿತಿ ಇದೆ. ಈ ಹಿಂದಿನ ದಿನಗಳಲ್ಲಿ ಕಾಲುಬಾಯಿ ಜ್ವರಕ್ಕೆ ತುತ್ತಾದಂಥ ಸಂದರ್ಭದಲ್ಲಿ ಏನು ಈ ಸರ್ಕಾರ 25 ಕೋಟಿ ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟಿರುವುದು ಸಹ ಒಂದು ಒಳ್ಳೆಯ ವಿಚಾರವಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರ ಮೂಲಕ ಮಾನ್ಯ ಸಚಿವರಾದಂಥ ಜಯಚಂದ್ರರವರಲ್ಲಿ ಮನವಿ ಮಾಡುವುದು ಇಷ್ಟೇ. ಇವತ್ತು ವಿಮಾ ಯೋಜನೆ ಇದೆ. ಕೇಂದ್ರ ಸರ್ಕಾರ ಒಂದು ಹಸುವಿಗೆ 30 ಸಾವಿರ ರೂಪಾಯಿಗಳ coverage ಗೆ 1,541 ರೂಪಾಯಿಗಳ ವಿಮೆಯಲ್ಲಿ 50% ಭರಿಸುತ್ತದೆ. ಇನ್ನು 50% ಅನ್ನು ರೈತ ಭರಿಸಬೇಕಾಗಿದೆ. ಅದರಿಂದ ರಾಜ್ಯ ಸರ್ಕಾರ 25% ಆದರೂ ವಿಮಾ ಹಣವನ್ನು ಭರಿಸಿದರೆ ಉಳಿದಿರುವಂತಹ 750 ರೂಪಾಯಿಗಳನ್ನು ಭರಿಸಿದರೆ ಸತ್ತು ಹೋದಂತಹ ಸಂದರ್ಭದಲ್ಲಿ 3 ವರ್ಷಗಳ coverage ಇರುವುದರಿಂದ ರೈತನಿಗೆ 30 ಸಾವಿರ ರೂಪಾಯಿಗಳ ಅನುಕೂಲವಾಗುತ್ತದೆ. ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ

ಗಮನಹರಿಸಬೇಕು ಎಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತಿದ್ದೇನೆ. ಇದರ ಜೊತೆಗೆ ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಬಹುಶಃ ಕಳೆದ ವರ್ಷ 2,126 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದೆ. ಆದರೆ, ಈ ವರ್ಷ ಸಹಕಾರ ಇಲಾಖೆಯ ಕಾರ್ಯಕ್ರಮಗಳಿಗೆ 666 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದೆ. ಇದರಿಂದ ತುಂಬಾ ವ್ಯತ್ಯಾಸವಾಗಿದೆ. ಏಕೆಂದರೆ, ಸಹಕಾರ ಇಲಾಖೆ ಬಹು ದೊಡ್ಡ ಇಲಾಖೆ. ಬಹುಶಃ ಅದು ಏತಕ್ಕೋಸ್ಕರ ಇಷ್ಟು ಕಡಿಮೆಯಾಗಿದೆ ಎಂಬುದು ಗೊತ್ತಿಲ್ಲ. ಈ ಸರ್ಕಾರ ಶೂನ್ಯ ಬಡ್ಡಿದರದಲ್ಲಿ 3 ಲಕ್ಷ ರೂಪಾಯಿಗಳವರೆಗೆ ಸಾಲವನ್ನು ಕೊಡುತ್ತೇವೆ ಎನ್ನುವುದನ್ನು ಘೋಷಣೆ ಮಾಡಿದೆ. ಆದರೆ, ನಾನೂ ಕೂಡ ಒಬ್ಬ ಸಹಕಾರಿಯಾಗಿ, ಜಿಲ್ಲಾ ಬ್ಯಾಂಕ್‌ನ ಅಧ್ಯಕ್ಷನಾಗಿ ಇವತ್ತು ಏನಾಗಿದೆ ಎಂದರೆ ಈ ರಾಜ್ಯದಲ್ಲಿ ಕೇವಲ 15% ರೈತರಿಗೆ ಮಾತ್ರ ಇದು ಅನುಕೂಲವಾಗಿದೆ. ಸರ್ಕಾರ ಇದಕ್ಕೆ ಸಾಲ ಒದಗಿಸುವುದಿಲ್ಲ, ಆದರೆ, ಬಡ್ಡಿ ಸಹಾಯ ಧನವನ್ನು ಮಾತ್ರ ಕೊಡುವುದು ಸರ್ಕಾರ. ಇದರಿಂದ ಏನಾಗಿದೆ ಎಂದರೆ ನಾವು ಮುಜುಗರಕ್ಕೆ ಒಳಗಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಏಕೆಂದರೆ, ಜಿಲ್ಲಾ ಬ್ಯಾಂಕ್ ಇರಬಹುದು, ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘಗಳಿರಬಹುದು, ಅಲ್ಲಿ ರೈತರು ನೇರವಾಗಿ ಬಂದು ಇವತ್ತು ಸರ್ಕಾರ 0% ನಲ್ಲಿ 3 ಲಕ್ಷ ರೂಪಾಯಿಗಳವರೆಗೆ ಸಾಲವನ್ನು ಕೊಡುತ್ತೇವೆ ಎಂದು ಘೋಷಣೆ ಮಾಡಿದ್ದಾರೆ, ನೀವು ಏಕೆ ಕೊಡುತ್ತಿಲ್ಲವೆಂದು ಕೇಳುತ್ತಾರೆ. ಅಲ್ಲಿ ಸಂಪನ್ಮೂಲದ ಕೊರತೆ. ಆದ್ದರಿಂದ, ಪ್ರತಿ ಜಿಲ್ಲಾ member ಗಳಿಗೂ ಕೂಡ ಆರ್ಥಿಕ ನೆರವನ್ನು ಕೊಟ್ಟು, ಬೇಕಾದರೆ ಸಹಾಯ ಧನದ ರಿಯಾಯಿತಿ ಕೊಟ್ಟರೆ ಅನುಕೂಲವಾಗುತ್ತದೆ. ಇದರಿಂದ ಸಹಕಾರಿ ಇಲಾಖೆಯಲ್ಲಿ ಕೇವಲ 15% ಮಾತ್ರ ರೈತರಿಗೆ ಅನುಕೂಲವಾಗುತ್ತದೆ. ಆದ್ದರಿಂದ ತಮ್ಮ ಮೂಲಕ ಸರ್ಕಾರಕ್ಕೆ ನನ್ನ ಮನವಿ ಏನೆಂದರೆ, ಖಾಸಗಿ ಬ್ಯಾಂಕುಗಳಲ್ಲಿಯೂ ಸಹ ಬೆಳೆ ಸಾಲವನ್ನು 85% ರೈತರು ಪಡೆದಿದ್ದಾರೆ. ಅವರಿಗೆ ಅನುಕೂಲವಾಗುತ್ತಿಲ್ಲ. ಆದ್ದರಿಂದ ಬಡ್ಡಿ ರಿಯಾಯಿತಿಯಲ್ಲಿ ಸಹಾಯ ಧನವನ್ನು ಖಾಸಗಿ ಬ್ಯಾಂಕುಗಳಲ್ಲಿಯೂ ಪಡೆದಿರುವಂತಹ ಬೆಳೆ ಸಾಲಕ್ಕೂ ಕೂಡ ಅನ್ವಯ

ಆಗುವಂತಹ ರೀತಿಯಲ್ಲಿ ಸರ್ಕಾರ ಅವಕಾಶವನ್ನು ಮಾಡಿಕೊಡಬೇಕು ಎಂದು ನಾನು ಮನವಿ ಮಾಡುತ್ತೇನೆ. ಅದರ ಜೊತೆಗೆ ಇವತ್ತು ನೀರಾವರಿ ಇಲಾಖೆಗೆ ಈ ಹಿಂದಿನ ಸಾಲಿನಲ್ಲಿ ಸರ್ಕಾರ 9,812 ಕೋಟಿಯನ್ನು ನಿಗದಿ ಮಾಡಿದೆ, ಅದರಲ್ಲಿ ಬಹುಶಃ 50% ಮಾತ್ರ ವ್ಯಯ ಆಗಿದೆ ಎನ್ನುವುದನ್ನು ಅಂಕಿ–ಸಂಖ್ಯೆಗಳ ಆಧಾರದಲ್ಲಿ ತಿಳಿದಿದ್ದೇವೆ. ಈ ಸಾಲಿನಲ್ಲಿ 11,349 ಕೋಟಿ ರೂಪಾಯಿಗಳನ್ನು ನೀರಾವರಿ ಯೋಜನೆಗೆ ಬಳಸುವಂತಹದ್ದಕ್ಕೆ ಸರ್ಕಾರ ನಿಗದಿ ಮಾಡಿದೆ. ಇವತ್ತು ನಮ್ಮ ಭಾಗದ ಪರಿಸ್ಥಿತಿ ತುಂಬಾ ಕಷ್ಟಕರವಾಗಿದೆ. ಇವತ್ತು ಬಾಗೂರು ಸುರಂಗ ಮಾರ್ಗ, ಇಡೀ ಏಷ್ಯಾ ಖಂಡದಲ್ಲಿಯೇ ಇದು ಎರಡನೇ ಬಹು ದೊಡ್ಡ ಸುರಂಗ ಮಾರ್ಗ. 270 ಅಡಿ ಆಳದಲ್ಲಿ ತುಮಕೂರು ಜಿಲ್ಲೆಗೆ ನೀರನ್ನು ಒದಗಿಸುವಂತಹದ್ದು. ಅದು ಮಾನ್ಯ ಜಯಚಂದ್ರರವರಿಗೂ ಸಹ ತಿಳಿದಿರುವಂತಹ ವಿಚಾರ. ಇವತ್ತು ನೀರನ್ನು ಆ ಸುರಂಗ ಮಾರ್ಗದಲ್ಲಿ ಕೊಟ್ಟ ಮೇಲೆ ನಮ್ಮ ಭಾಗದಲ್ಲಿ ಬಹುತೇಕ ಅಂತರ್ಜಲ ಕುಸಿದು ಇವತ್ತು ಜೀವನ ಮಾಡದೇ ಇರತಕ್ಕಂತಹ ಸ್ಥಿತಿ ನಿರ್ಮಾಣವಾಗಿದೆ. ಎಲ್ಲಾ ತೆಂಗು ಕೂಡ ಒಣಗಿ ಹೋಗಿದೆ. ಯಾವುದೇ ಬೆಳೆಯನ್ನು ಕೂಡ ಬೆಳೆಯದೇ ಇರತಕ್ಕಂತಹ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಇವತ್ತು ಏನು ಜನಿವಾರ ಕೆರೆಯಿಂದ ಜುತ್ತಳ್ಳಿ ಏತನೀರಾವರಿ ಯೋಜನೆ 1994ನೇ ಇಸವಿಯಲ್ಲಿ ಸರ್ವೆ ಆದಂತಹದ್ದು, ಇದುವರೆಗೂ ಕೂಡ Committee approval ಆಗಿಲ್ಲ. ಇದನ್ನು ಮಾನ್ಯ ನೀರಾವರಿ ಸಚಿವರ ಗಮನಕ್ಕೂ ಕೂಡ ತಂದಿದ್ದೇವೆ. ಇವತ್ತು ಕಾವೇರಿ ನೀರಾವಿ ನಿಗಮದಲ್ಲಿಯೂ ಕೂಡ ಕಮಿಟಿಯಲ್ಲಿ ತಾರತಮ್ಯ ಮಾಡುತ್ತಿದ್ದಾರೆ. ಈ ನಮ್ಮ ಅಳಲನ್ನು ನಿಮ್ಮ ಮೂಲಕ ತಿಳಿಸುವುದಕ್ಕೆ ಬಯಸುತ್ತೇನೆ. ದಯಮಾಡಿ ನನಗೆ 5 ನಿಮಿಷ ಕೊಡಿ ಅಧ್ಯಕ್ಷರೆ. ನಮ್ಮದು ಈ ಪರಿಸ್ಥಿತಿ ಇದೆ.

ಅಧ್ಯಕ್ಷರು:– ದಯವಿಟ್ಟು ಎಲ್ಲಾ ಹೋಗುತ್ತಿದ್ದಾರೆ. No.

ಶ್ರೀ ಸಿ.ಎನ್. ಬಾಲಕೃಷ್ಣ:– ಮೊನ್ನೆ ನಡೆದಂತಹ ಒಂದು ಸಮಿತಿಯಲ್ಲಿ 24 ಗಂಟೆ ಕರೆಂಟ್ ಅನ್ನು ಉಪಯೋಗ ಮಾಡಿ 38 ದಿವಸಗಳಲ್ಲಿ 23 ಕೆರೆಗಳನ್ನು ತುಂಬಿಸುವಂತಹದ್ದಕ್ಕೆ 154 ಕ್ಯೂಸೆಕ್ಸ್‌ಗೆ ಆ Committee

approval ಆಗಿದೆ. ಅದರಲ್ಲಿ ಮಾನ್ಯ ನೀರಾವರಿ ಸಚಿವರು ಸಮಿತಿಯಲ್ಲಿಲ್ಲ. Cabinet meeting ಬಂದಾಗ ಬರುತ್ತದೆ. ಆದರೆ, ನಮ್ಮ ಯೋಜನೆಯನ್ನು ಫಲಪ್ರದವಾಗಿ approval ಮಾಡದೇ ಅದನ್ನು pending ಇಟ್ಟು ತೊಂದರೆ ಮಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಅದನ್ನು ಮಾನ್ಯ ನೀರಾವರಿ ಸಚಿವರ ಗಮನಕ್ಕೂ ಕೂಡ ಈಗಾಗಲೇ ತಂದಿದ್ದೇವೆ. ದಯಮಾಡಿ ಕೂಡಲೇ ಆ Committee approval ಮಾಡಿಸಿ ನಮಗೆ ಅನುಕೂಲ ಮಾಡಿಕೊಡಬೇಕು ಎಂದು ತಮ್ಮ ಮೂಲಕ ಮನವಿ ಮಾಡುತ್ತೇವೆ. ದಯಮಾಡಿ ಮಾನ್ಯ ಅಧ್ಯಕ್ಷರೆ, 1998ನೇ ಇಸವಿಯಲ್ಲಿ ದಿವಂಗತ ಶ್ರೀಕಂಠಯ್ಯನವರು ಸಚಿವರಾಗಿದ್ದಂತಹ ಸಂದರ್ಭದಲ್ಲಿ ಕಲ್ಲೇಸೋಮನಹಳ್ಳಿ ಏತನೀರಾವರಿ ಯೋಜನೆಗೆ ಅಡಿಗಲ್ಲನ್ನು ಹಾಕಿದಂತಹದ್ದು. ಅದು ತಾಂತ್ರಿಕ ಕಾರಣಗಳಿಂದ ಮುಂದೂಡಿ ಇದೂವರೆಗೂ ಆ ಭಾಗದಲ್ಲಿ ತೊಂದರೆಯಾಗಿದೆ. ಇವತ್ತು ಬಾಗೂರು ಸುರಂಗದಿಂದ ತುಮಕೂರು ಭಾಗಕ್ಕೆ ನೀರನ್ನು ಹರಿಸುತ್ತಿರುವಂತಹ ಈ ಸಂದರ್ಭದಲ್ಲಿ ನಮ್ಮ ಭಾಗದಿಂದ ಅವರಿಗೆ ಅನುಕೂಲವಾಗಿದೆ. ಆದರೆ, ನಾವು ಕಷ್ಟದಲ್ಲಿದ್ದೇವೆ. ಮಾನ್ಯ ದೇವೇಗೌಡರು ಲೋಕೋಪಯೋಗಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಬಾಗೂರು-ನವಿಲೆ ಏತನೀರಾವರಿ ಯೋಜನೆ ಮೂಲಕ ಸುಮಾರು 15 ಕೆರೆಗಳನ್ನು ತುಂಬಿಸುವಂತಹದ್ದನ್ನು ಬಿಟ್ಟರೆ ನಮ್ಮ ತಾಲ್ಲೂಕಿನಲ್ಲಿ 65% ತುಂಬಾ ಕಷ್ಟವನ್ನು ಎದುರಿಸುತ್ತಿದ್ದೇವೆ. ಅದಕ್ಕೆ ಕಲ್ಲೇಸೋಮನಹಳ್ಳಿ ಏತನೀರಾವರಿ ಯೋಜನೆಗೆ 65 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚಾಗಿ ಮೋಟರ್‌ಗಳನ್ನು ಕೂಡ ಖರೀದಿ ಮಾಡಿ 1998ನೇ ಇಸವಿಯಿಂದಲೂ ಕೂಡ ಅಂದರೆ 15 ವರ್ಷಗಳಿಂದಲೂ ಸಹ ಅದು ನಿಂತು ಹೋಗಿದೆ. ಆದ್ದರಿಂದ, ತಾಂತ್ರಿಕ ಕಾರಣಗಳಿಂದ ಅದನ್ನು ನವಿಲೆ approach ನಿಂದ ಅದನ್ನು approve ಮಾಡಿಸಿಕೊಡುವುದಕ್ಕೆ ಮಾನ್ಯ ನೀರಾವರಿ ಸಚಿವರು ಗಮನವನ್ನು ಹರಿಸಬೇಕೆಂದು ತಮ್ಮಲ್ಲಿ ಮನವಿಯನ್ನು ಈ ಮೂಲಕ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಎಲ್ಲಾದರೂ ಹೋಗುತ್ತಾರೆ. ಅದಕ್ಕೆ ಮಾಡನಾಡುತ್ತೇನೆ.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

(ಗೊಂದಲ)

ವಿಷಯ:- ಘಟಪ್ರಭಾ ನದಿಗೆ ಒಂದೂವರೆ ಟಿ.ಎಂ.ಸಿ. ಕುಡಿಯುವ ನೀರು ಬಿಡುಗಡೆ ಮಾಡುವ ಬಗ್ಗೆ.

ಅಧ್ಯಕ್ಷರು:- ಮೊದಲು ಇದು ಪೂರೈಸಲಿ ತಾಳ್ರಿ. ಅವರು ಎಲ್ಲಿಗೂ ಹೋಗುವುದಿಲ್ಲ. ಚರ್ಚೆ ಮಧ್ಯದಲ್ಲಿ ಮಾತನಾಡುವುದಕ್ಕೆ ಆಗುತ್ತದೆಯೇ?

ಶ್ರೀ ಗೋವಿಂದ ಎಂ. ಕಾರಜೋಳ:- ಘಟಪ್ರಭಾ ಯೋಜನೆಗೆ ಒಂದೂವರೆ ಟಿ.ಎಂ.ಸಿ. ನೀರನ್ನು ಬಿಡುಗಡೆ ಮಾಡುವುದಕ್ಕೆ ಅವರು. ..

(ಗೊಂದಲ)

ಅಧ್ಯಕ್ಷರು:- ಬಿಡುಗಡೆ ಮಾಡಿ ನಾಳೆ. ಒಂದೂವರೆ ಟಿಎಂಸಿ ನೀರು ಬಿಡಬೇಕು ಎಂದರೆ ಬಿಡ್ರಿ.

ಶ್ರೀ ಗೋವಿಂದ ಎಂ. ಕಾರಜೋಳ:- ಹೇಗೆ ಮಾಡುತ್ತೀರಿ ಹೇಳಿ. ಘಟಪ್ರಭಾ ನದಿಗೆ ಒಂದೂವರೆ ಟಿ.ಎಂ.ಸಿ. ನೀರನ್ನು ಮುಧೋಳ ಹಾಗೂ ಕೆಲವು ಗ್ರಾಮಗಳಿಗೆ ಕುಡಿಯವು ನೀರಿಗೆ ಬಿಡುಗಡೆ ಮಾಡಬೇಕು. ಒಂದು ಹೇಳಿ ಬಿಡುತ್ತೇನೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ:- ಮಾನ್ಯ ಅಧ್ಯಕ್ಷರೆ, ಇದನ್ನು ಪರಿಶೀಲನೆ ಮಾಡುತ್ತೇವೆ.

(ಗೊಂದಲ)